# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 350 |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.12.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ನಡೆದಿರುವ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಗಳೆಷ್ಟು; ಈ ಪೈಕಿ ಒತ್ತುವರಿ ತೆರವು ಮಾಡಿ ಮರು ವಶಪಡಿಸಿಕೊಂಡಿರುವ ಭೂಮಿ ಎಷ್ಟು; ಈ ಭೂಮಿಯ ಒಟ್ಟು ಮೌಲ್ಯ ಎಷ್ಟು; (ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಗಳ ಸಂಖ್ಯೆ: 133850. ಸರ್ಕಾರಿ ಭೂಮಿ ಒತ್ತುವರಿ ತೆರವು ಮಾಡಿ ಮರು ವಶಪಡಿಸಿಕೊಂಡಿರುವ ಒಟ್ಟು ಭೂಮಿ 205916-24 ಎಕರೆ/ಗುಂಟೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಈ ಭೂಮಿಗಳ ಮಾರ್ಗಸೂಚಿ ಮತ್ತು ಮಾರುಕಟ್ಟೆ ಬೆಲೆಯಂತೆ ವಿವಿಧ ಜಿಲ್ಲೆಯಲ್ಲಿ ವಿವಿಧ ಗ್ರಾಮಗಳ ಸರ್ಕಾರಿ ಜಮೀನಿಗೆ ಒಂದೊಂದು ಮೌಲ್ಯವನ್ನು ನಿಗದಿಪಡಿಸಲಾಗಿರುತ್ತದೆ. |
| ಆ) | ಒತ್ತುವರಿದಾರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ಒತ್ತುವರಿಯಿಂದ ತೆರವುಗೊಂಡಿರುವ ಜಾಗವನ್ನು ರಕ್ಷಿಸಲು ಕೈಗೊಂಡಿರುವ ಕ್ರಮಗಳೇನು; | ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಜನವರಿ-2025ರ ಅಂತ್ಯಕ್ಕೆ ಒಟ್ಟು 24477 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 19292 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 5185 ಪ್ರಕರಣಗಳು ಬಾಕಿ ಇದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ವಿವಿಧ ಪ್ರಕರಣಗಳಲ್ಲಿ ಈವರೆಗೂ 92 ಜನರಿಗೆ ಒಂದು ವರ್ಷದಂತೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ.<br><br>ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಜಮೀನಿನ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br><br>1. ಭೂಮಿ ತಂತ್ರಾಂಶದಲ್ಲಿ ಯಾವುದೇ ಆರ್.ಟಿ.ಸಿ ಯನ್ನು ಸರ್ಕಾರದ ಹೆಸರಿನಿಂದ ಖಾಸಗಿ ವ್ಯಕ್ತಿಯ ಹೆಸರಿಗೆ ಬದಲಾವಣೆ ಮಾಡುವ ಮೊದಲು ತಹಶೀಲ್ದಾರರ ಅನುಮೋದನೆ ಕಡ್ಡಾಯವಾಗಿರುತ್ತದೆ.<br>2. ಯಾವುದೇ ಹೊಸ ಸರ್ವೆ ನಂಬರ್ ಸೃಜಿಸಲು ಅಥವಾ ಸರ್ವೆ ನಂಬರ್ ತೆಗೆದು ಹಾಕಲು(ಡಿಲೀಷನ್) ಮಾಡಲು ಭೂಮಿ ತಂತ್ರಾಂಶದಲ್ಲಿ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಯವರ ಆದೇಶದೊಂದಿಗೆ ಕ್ರಮವಹಿಸಲು ಅವಕಾಶವನ್ನು ನೀಡಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 3. ಯಾವುದೇ ಭೂ ಮಂಜೂರಾತಿ ಸಂದರ್ಭದಲ್ಲಿ ನಮೂನೆ 1 ರಿಂದ 5 ತುಂಬಲು ಇದ್ದ Manual ಪದ್ಧತಿಯನ್ನು ತೆಗೆದುಹಾಕಿದ್ದು, ತಂತ್ರಾಂಶದ ಮೂಲಕ ಭರ್ತಿ ಮಾಡಲು ಅವಕಾಶ ಮಾಡಲಾಗಿದೆ.<br><br>4. ಕಾವೇರಿ ಹಾಗೂ ಭೂಮಿ ತಂತ್ರಾಂಶ ಜೋಡಣೆಯಾಗಿರುವುದರಿಂದ ಯಾವುದೇ ಸರ್ಕಾರಿ ಭೂಮಿಯನ್ನು ಅನಧಿಕೃತವಾಗಿ ಮಾರಾಟ ಮಾಡಲು ಹಾಗೂ ಖರೀದಿಸಲು ಅವಕಾಶವಿರುವುದಿಲ್ಲ.<br><br>5. ಯಾವುದೇ ಸರ್ಕಾರಿ ಭೂಮಿ ಮೇಲೆ ಅನಧಿಕೃತವಾಗಿ ಮಾಡಿರುವ ಖಾತೆ ಬದಲಾವಣೆಯ ಸಂಬಂಧ ಕರ್ನಾಟಕ ಭೂಕಂದಾಯ ಕಾಯ್ದೆ 1964ರನ್ವಯ ಜಿಲ್ಲಾಧಿಕಾರಿಗಳು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ವಿಚಾರಣೆಗೆ ಅವಕಾಶವಿರುತ್ತದೆ.<br><br>6. ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಇಂಡೆಕ್ಸಿಂಗ್ ಅಂಡ್ ಕ್ಯಾಟಲಾಗಿಂಗ್ ಮತ್ತು ಸ್ಕ್ಯಾನಿಂಗ್ ಮಾಡಲಾಗುತ್ತಿದೆ.<br><br>7. ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ಜಮೀನುಗಳನ್ನು ಫ್ಲಾಗ್ ಮಾಡಲಾಗುತ್ತಿದೆ. ಇದರಿಂದ ಸರ್ಕಾರಿ ಜಮೀನುಗಳ ಅನಧಿಕೃತ ವಹಿವಾಟು ಮಾಡಲು ಹಾಗೂ ಅನಧಿಕೃತ ಋಣಭಾರಗಳನ್ನು ಸೃಷ್ಟಿಸಲು ಅವಕಾಶವಿರುವುದಿಲ್ಲ.<br><br>8. <u>ಬೀಟ್ ತಂತ್ರಾಂಶ(Beat App)</u>: ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಮಾಡಿ ಒತ್ತುವರಿಗಳಿಂದ ರಕ್ಷಣೆ ಮಾಡುವ ಸಲುವಾಗಿ ಬೀಟ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಿಂದಾಗಿ ಎಲ್ಲಾ ರೀತಿಯ ಸರ್ಕಾರಿ ಜಮೀನುಗಳನ್ನು ಗುರುತಿಸಿ Geo fencing ಹದ್ದುಬಸ್ತು ಮೂಲಕ ಒತ್ತುವರಿಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ತಂತ್ರಾಂಶದಲ್ಲಿ ಇಂದೀಕರಿಸಲು ಅವಕಾಶ ನೀಡಲಾಗುತ್ತದೆ. ಸದರಿ ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ವಿಡಿಯೋ ಮಹಜರ್ ಮತ್ತು ಭಾವಚಿತ್ರಗಳನ್ನು ಅಪ್ಲೋಡ್ (Upload) ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯಾಗಿ ಸರ್ಕಾರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಜಮೀನುಗಳನ್ನು ರಕ್ಷಿಸಲು ನಿರಂತರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡಲು ತಂತ್ರಾಂಶವು ಸಹಾಯಕಾರಿಯಾಗಿರುತ್ತದೆ. ಸದ್ಯದಲ್ಲಿಯೇ ಬೀಟ್ ತಂತ್ರಾಂಶವನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು.<br><br>9. ಒತ್ತುವರಿಯಿಂದ ತೆರವುಗೊಳಿಸಲಾದ ಸರ್ಕಾರಿ ಜಮೀನುಗಳಿಗೆ ಕಂದಕ, ತಂತಿಬೇಲಿ ಹಾಕಿ ಮತ್ತು ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ವಹಿಸಲಾಗುತ್ತಿದೆ.<br><br>10. ಖೋಟಾ ದಾಖಲೆಗಳು ಸೃಷ್ಟಿಯಾಗಿರುವಂತಹ ಪ್ರಕರಣಗಳಲ್ಲಿ ದಾಖಲೆಗಳ ನೈಜತೆ ಪರಿಶೀಲನೆಗಾಗಿ Forensic Lab ಗಳಿಗೆ (ವರ್ಷಗಳ ಅಂತರ ಗೊತ್ತಾಗುತ್ತದೆ) ಕಳುಹಿಸಲು ಕ್ರಮ ವಹಿಸಲಾಗುತ್ತಿದೆ. |
| ಇ) | ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಪಟ್ಟಂತೆ ಸರ್ಕಾರ ನೇಮಕ ಮಾಡಿದ್ದ ವಿವಿಧ ಸಮಿತಿಗಳು ನೀಡಿರುವ ವರದಿಗಳು ಯಾವುವು; ಸದರಿ ವರದಿಗಳನ್ನು ಸರ್ಕಾರ ಅಂಗೀಕರಿಸಿದೆಯೇ; ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಮುಖ ಅಂಶಗಳೇನು; | ಸರ್ಕಾರಿ ಜಮೀನುಗಳ ಒತ್ತುವರಿ ಗುರುತಿಸಿ ಸಂರಕ್ಷಿಸಲು ಮಾರ್ಗೋಪಾಯಗಳನ್ನು ಸೂಚಿಸಲು ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಧಾನಮಂಡಲದ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು.<br><br>ಜಂಟಿ ಸದನ ಸಮಿತಿಯು, ಮಧ್ಯಂತರ ವರದಿಯ ಭಾಗ-1ನ್ನು ದಿನಾಂಕ:20.12.2006 ರಂದು ಹಾಗೂ ಭಾಗ-2ನ್ನು ದಿನಾಂಕ:12.07.2007ರಂದು ಮಂಡಿಸಲಾಗಿದೆ.<br><br>ಶ್ರೀ ವಿ. ಬಾಲಸುಬ್ರಹ್ಮಣ್ಯನ್‌ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಭೂಮಿಯನ್ನು ಹಿಂದಕ್ಕೆ ಪಡೆಯಲು ಮತ್ತು ಸಂರಕ್ಷಿಸುವ ಸಲುವಾಗಿ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯನ್ನು ರಚಿಸಲಾಗಿತ್ತು.<br><br>ಸದರಿ ಸಮಿತಿಯ ಶಿಫಾರಸ್ಸುಗಳನ್ನು ಸಿ.ಡಿ.ಯಲ್ಲಿ ನೀಡಲಾಗಿದೆ. |
| ಈ) | ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಪಟ್ಟಂತೆ, ಭೂಗಳ್ಳರ ಜೊತೆ ಶಾಮೀಲಾಗಿರುವ ಅಧಿಕಾರಿ /ನೌಕರರನ್ನು ಗುರುತಿಸಲಾಗಿದೆಯೇ; ಸದರಿ ಅಧಿಕಾರಿ/ನೌಕರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಪಟ್ಟಂತೆ, ಭೂಗಳ್ಳರ ಜೊತೆ ಶಾಮೀಲಾಗಿರುವ ಅಧಿಕಾರಿ / ನೌಕರರುಗಳ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 192-ಬಿ ರಂತೆ ಕ್ರಮವಹಿಸಲಾಗುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 20 ಎಲ್‌ಜಿಪಿ 2020, ದಿ: 20.01.2020 ರಂತೆ ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು/ಭೂ ಕಬಳಿಕೆಗೆ ದುಷ್ಪ್ರೇರಣೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನೀಡಲು ನಕಲಿ ದಾಖಲೆಗಳನ್ನು ಸೃಷ್ಟಿಸಲು ಶಾಮೀಲಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ. |
| ಉ) | ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದ ಮೇಲೆ ಆಗಿರುವ ಪ್ರಗತಿ ಏನು? (ಜಿಲ್ಲಾವಾರು ವಿವರ ನೀಡುವುದು) | ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲದಲ್ಲಿ, ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 192-ಎ ರನ್ವಯ ದಾಖಲಿಸಲಾಗುತ್ತಿದೆ ಹಾಗೂ ಅಕ್ರಮವಾಗಿ ಪರಭಾರೆ ಮಾಡುತ್ತಿರುವವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗುತ್ತಿದೆ.<br><br>ಜಿಲ್ಲಾಧಿಕಾರಿಗಳು ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳನ್ನು ಪ್ರತಿ ಮಾಹೆಯ ವಾರಾಂತ್ಯದಲ್ಲಿ ತೆರವುಗೊಳಿಸಿ ಅಂತಹ ಜಮೀನುಗಳಿಗೆ ತಂತಿಬೇಲಿ ಹಾಕಿ ಸಂರಕ್ಷಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 103 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

| ಕ್ರ. ಸಂ | ಜಿಲ್ಲೆಗಳು | ಒಟ್ಟು ಒತ್ತುವರಿ ಪ್ರಕರಣಗಳ ಸಂಖ್ಯೆ / ವಿಸ್ತೀರ್ಣ | ತೆರವುಗೊಳಿಸಿರುವ ವಿಸ್ತೀರ್ಣ | ಮೌಲ್ಯ |
|---|---|---|---|---|
| 1 | ಬೆಂಗಳೂರು ನಗರ | 15455<br>34220-21-13(ಎ/ಗು) | 14701-20.03 | ಮಾರ್ಗಸೂಚಿ ಮತ್ತು ಮಾರುಕಟ್ಟೆ ಬೆಲೆಯಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ವಿವಿಧ ಗ್ರಾಮಗಳ ಸರ್ಕಾರಿ ಜಮೀನಿಗೆ ಒಂದೊಂದು ಮೌಲ್ಯವನ್ನು ನಿಗಧಿಪಡಿಸಲಾಗಿರುತ್ತದೆ. |
| 2 | ಬೆಂಗಳೂರು ಗ್ರಾಮಾಂತರ | 8647 | 8603 | 55,91,95,000/- |
| 3 | ಚಿಕ್ಕಬಳ್ಳಾಪುರ | 6191 | 8600-32 | - |
| 4 | ಚಿತ್ರದುರ್ಗ | 7470 | 1526-02 | - |
| 5 | ದಾವಣಗೆರೆ | 2185 | 2487 | 12,43,50,000/- |
| 6 | ಕೋಲಾರ | 2427 | 6295-04 | ಭೂಮಿಯ ಮೌಲ್ಯ ತಿಳಿದುಬಂದಿರುವುದಿಲ್ಲ. |
| 7 | ರಾಮನಗರ | 3426-11(ಎ/ಗು) | 2720-08 | 11,03,58,00,000/- |
| 8 | ಶಿವಮೊಗ್ಗ | 8108-29(ಎ/ಗು) | 3973-31 | 12,75,45,000/- |
| 9 | ತುಮಕೂರು | 5631<br>9188-24 (ಎ/ಗು) | 7729-01 | 80,23,58,200/- |
| 10 | ಚಾಮರಾಜನಗರ | 1830<br>9196-26 (ಎ/ಗು) | 5933-07 | ಒತ್ತುವರಿ ತೆರವುಗೊಳಿಸಿ ವಶಪಡಿಸಿಕೊಂಡಿರುವ ಜಮೀನಿನ ಮೌಲ್ಯವನ್ನು ಸಂಬಂಧಪಟ್ಟ ಉಪನೋಂದಣಾಧಿಕಾರಿಗಳಿಂದ ಧೃಡಪಡಿಸಿಕೊಳ್ಳಬೇಕಿರುತ್ತದೆ |
| 11 | ಚಿಕ್ಕಮಗಳೂರು | 8316 | 7988-06 | ಪ್ರಸ್ತುತ ನೋಂದಣಿ ಇಲಾಖೆಯ ಮಾರ್ಗ ಸೂಚಿ ದರವಾಗಿರುತ್ತದೆ. |
| 12 | ದಕ್ಷಿಣ ಕನ್ನಡ | 352 | 1968-33 | ನಿಗಧಿಯಾಗಿರುವುದಿಲ್ಲ |
| 13 | ಹಾಸನ | 34519 | 3323-13 | ನಿಗಧಿಯಾಗಿರುವುದಿಲ್ಲ |
| 14 | ಕೊಡಗು | 916 | **5.22** | 36,82,000/- |
| 15 | ಮಂಡ್ಯ | 6825 | 4714-07 | 67,73,70,000/- |
| 16 | ಮೈಸೂರು | 627<br>42621-18-12 (ಎ/ಗು) | 13440-37 | ನಿಗಧಿಯಾಗಿರುವುದಿಲ್ಲ |
| 17 | ಉಡುಪಿ | 1782 | **1802-35** | ಪ್ರಸ್ತುತ ನೋಂದಣಿ ಇಲಾಖೆಯ ಮಾರ್ಗ ಸೂಚಿ ದರವಾಗಿರುತ್ತದೆ. |
| 18 | ಬಳ್ಳಾರಿ | 05 | 2-09 | - |
| 19 | ಬೀದರ್ | 764 | 3833-00 | - |
| 20 | ಕಲಬುರಗಿ | 989-19(ಎ/ಗು) | 7909-17 | - |

| | | | | |
|---|---|---|---|---|
| 21 | ಕೊಪ್ಪಳ | 3245-26(ಎ/ಗು) | 3094-23 | - |
| 22 | ರಾಯಚೂರು | 3620-19(ಎ/ಗು) | 3620-19 | - |
| 23 | ಯಾದಗಿರಿ | 8871-36(ಎ/ಗು) | 4694-39 | - |
| 24 | ವಿಜಯನಗರ | 64516-34 (ಎ/ಗು) | **14408-29** | - |
| 25 | ಬಾಗಲಕೋಟೆ | 6395 | 1199-06 | 5,99,50,000/- |
| 26 | ಬೆಳಗಾವಿ | 7146 | 2541-13 | 59,80,89,000 |
| 27 | ಬಿಜಾಪುರ /ವಿಜಯಪುರ | 2261 | 1730-14 | 69,72,000/- |
| 28 | ಧಾರವಾಡ | 2014 | 2385-33 | 51,75,38,000/- |
| 29 | ಗದಗ | 112 | 1288-03 | 13,52,40,000/- |
| 30 | ಹಾವೇರಿ | 8344 | 62634-32 | 45,13,50,000/- |
| 31 | ಉತ್ತರ ಕನ್ನಡ | 3636 | **760-9-6** | 28,46,49,000/- |
| **ಒಟ್ಟು** | | **133850** | **205916-24** | **15384088200/-** |

## ಶಿಫಾರಸ್ಸುಗಳು

**1. ಒತ್ತುವರಿಗಳ ಬಗ್ಗೆ ವ್ಯವಹರಿಸಲು ವಿಶೇಷ ನ್ಯಾಯಾಲಯ:-**

ಆಂಧ್ರ ಪ್ರದೇಶ ಸರ್ಕಾರವು, 1982ರಲ್ಲಿಯೇ ಆಂಧ್ರ ಪ್ರದೇಶ ಭೂಕಬಳಿಕೆ (ನಿಷೇಧ) ಅಧಿನಿಯಮವನ್ನು ಜಾರಿಗೆ ತಂದಿದ್ದು, ತನ್ಮೂಲಕ ಭೂ ಕಬಳಿಕೆದಾರರಿಗೆ ಮತ್ತು ಆ ನಿಟ್ಟಿನಲ್ಲಿ ಕುಮ್ಮಕ್ಕು ನೀಡುವವರಿಗೆ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಹೈದರಾಬಾದ್‌ನಲ್ಲಿ ಪ್ರತ್ಯೇಕ ವಿಶೇಷ ನ್ಯಾಯಾಲಯಗಳನ್ನು ಮತ್ತು ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಧೀಕರಣಗಳನ್ನು ರಚಿಸಿದೆ. ಯುಕ್ತ ಮಾರ್ಪಾಡುಗಳೊಂದಿಗೆ ಕರ್ನಾಟಕ ಸರ್ಕಾರವು ಸಹ ಕೂಡಲೇ ಸುಧಾರಣಾತ್ಮಕ ಕ್ರಮಗಳೊಂದಿಗೆ ಇಂತಹ ಒಂದು ಶಾಸನವನ್ನು ರಚಿಸಬೇಕು. ಇಂತಹ ಒಂದು ಶಾಸನವನ್ನು ಸುಮಾರು 24 ವರ್ಷಗಳ ಹಿಂದೆಯೇ ಆಂಧ್ರ ಪ್ರದೇಶ ಸರ್ಕಾರವು ಜಾರಿಗೆ ತಂದಿದ್ದರಿಂದಲೇ ಹೈದರಾಬಾದನಂತಹ ನಗರದಲ್ಲಿ ಭೂಕಬಳಿಕೆಯನ್ನು ಬಹುಮಟ್ಟಿಗೆ ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗಿರುತ್ತದೆ.

ಬಹುತೇಕ ಪ್ರಭಾವಿ ವ್ಯಕ್ತಿಗಳಾಗಿರುವ ಮತ್ತು ಸಮಾಜದ ಶ್ರೀಮಂತ ವರ್ಗಗಳಿಗೆ ಸೇರಿರುವ ಒತ್ತುವರಿದಾರರು ಅನುಸರಿಸುವ ಸಾಮಾನ್ಯ ತಂತ್ರಗಳೆಂದರೆ, ಸಿವಿಲ್ ನ್ಯಾಯಾಲಯಗಳಿಂದ ಪ್ರಾರಂಭಿಸಿ ಸರ್ವೋಚ್ಚ ನ್ಯಾಯಾಲಯದವರೆಗೆ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡುವುದು ಅನೇಕ ಪ್ರಕರಣಗಳಲ್ಲಿ ಒಂದು ಸಿವಿಲ್ ನ್ಯಾಯಾಲಯವು, ಸರ್ಕಾರದ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಗೃಹ ಮಂಡಳಿಗಳಂಥಹ ಶಾಸನಬದ್ಧ ಸಂಸ್ಥೆಗಳ ಪರವಾಗಿ ಆದೇಶಗಳನ್ನು ಹೊರಡಿಸಿದ್ದಾಗ್ಯೂ ಒತ್ತುವರಿದಾರರು ಇತರ ಕೆಲವು ಸದಸ್ಯರ ಹೆಸರಿನಲ್ಲಿ ಇತರ ನ್ಯಾಯಾಲಯಗಳಲ್ಲಿ ಅಥವಾ ಅದೇ ನ್ಯಾಯಾಲಯದಲ್ಲಿ ಮೂಲ ದಾವೆಗಳು ಅಥವಾ ನಿರ್ಬಂಧಾಜ್ಞೆ ದಾವೆಯನ್ನು ಸಲ್ಲಿಸುವುದು. ಆ ದಾವೆಗಳು ಸಹಾ ನ್ಯಾಯಾಲಯಗಳಿಂದ ಸಾಂಧರ್ಭಿಕವಾಗಿ ಅಂಗೀಕೃತವಾಗುವುದು ಸಮಿತಿಯ ಗಮನಕ್ಕೆ ಬಂದಿದೆ. ಕರ್ನಾಟಕ ಗೃಹ ಮಂಡಳಿಗೆ ಸಂಬಂಧಿಸಿದ ಭೂಮಿಯ ಒತ್ತುವರಿದಾರರಿಂದ ರಿಟ್ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ವಜಾಗೊಳಿಸಿದ್ದಾಗ್ಯೂ, ಆ ಒತ್ತುವರಿದಾರರು ಕೆಳಹಂತದ ನಗರ ಸಿವಿಲ್ ನ್ಯಾಯಾಲಯದಿಂದ ನಿರ್ಬಂಧಾಜ್ಞೆ ಪಡೆದ ಪ್ರಕರಣವೊಂದಿದೆ. ಹತ್ತು ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲದಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುವ ಪ್ರಕರಣಗಳಿವೆ.

ಸಾರ್ವಜನಿಕರಿಗೆ ತೊಂದರೆ ಮತ್ತು ನಷ್ಟ ಉಂಟುಮಾಡುವಂಥಹ ನಿರರ್ಥಕ ವ್ಯಾಜ್ಯಗಳನ್ನು ತಡೆಯಲು ಒತ್ತುವರಿ ಪ್ರಕರಣಗಳಿಗಾಗಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದು ಅಗತ್ಯವಾಗಿದೆ. ಇದರಿಂದ ಅಂಥಹ ಎಲ್ಲಾ ಪ್ರಕರಣಗಳನ್ನು ಆ ವಿಶೇಷ ನ್ಯಾಯಾಲಯದ ಮುಂದೆ ಸಲ್ಲಿಸಲು ಅನುಕೂಲವಾಗುತ್ತದೆ. ಈ ನ್ಯಾಯಾಲಯದ ಆದೇಶಗಳ ಮೇಲೆ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗ ಬಹುದೆಂಬುದಕ್ಕೆ ಯಾವುದೇ ನಿರ್ಬಂಧವಿಲ್ಲ. ಆದರೆ ವಿಶೇಷ ನ್ಯಾಯಾಲಯದ ಸ್ಥಾಪನೆಯು ವಿವಿಧ ನ್ಯಾಯಾಲಯಗಳ ಮುಂದೆ ವಿವಿಧ ಅರ್ಜಿಗಳನ್ನು ದಾಖಲು ಮಾಡುವುದನ್ನು ಮತ್ತು ಪ್ರಕರಣಗಳು ದೀರ್ಘಕಾಲದಿಂದ ಇತ್ಯರ್ಥವಾಗದಿರುವ ವಿಳಂಭವನ್ನು ಕಡಿಮೆ ಮಾಡಬಹುದು.

**2. ಭೂ ಕಬಳಿಕೆದಾರರ ವಿರುದ್ಧ ಅಸ್ತಿತ್ವದಲ್ಲಿರುವ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ:-**

ಕರ್ನಾಟಕ ಕಳ್ಳ ಸಾಗಣಿಕೆದಾರರ, ಭೂ ಕಬಳಿಕೆದಾರರ ಇತ್ಯಾದಿ ಅಪಾಯಕಾರಿ ಚಟುವಟಿಕೆ ತಡೆಗಟ್ಟುವಿಕೆ ಅಧಿನಿಯಮ, 1985 ರಡಿಯಲ್ಲಿ ಕ್ರಮಕ್ಕೆಗೊಳ್ಳಲು ಮುಂದಾಗಬೇಕು. ಈ ಅಧಿನಿಯಮದಡಿಯಲ್ಲಿ ಭೂ ಕಬಳಿಕೆದಾರ ಎಂದರೆ ಯಾವುದೇ ಸರ್ಕಾರದ, ಸ್ಥಳೀಯ ಸಂಸ್ಥೆಗಳ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಥವಾ ಕಟ್ಟಡ ನಿರ್ಮಾಣ ಮಾಡುವ ವ್ಯಕ್ತಿ ಮತ್ತು ಇಂತಹ ಅಕ್ರಮ ಕೃತ್ಯಕ್ಕೆ ಕುಮ್ಮಕ್ಕು ನೀಡುವ ಯಾವನೇ ವ್ಯಕ್ತಿ ಎಂದು ಪರಿಭಾಷಿಸಲಾಗಿದೆ. ಹೀಗೆ ಅಧಿನಿಯಮವು ಯಾರೇ ಭೂ ಕಬಳಿಕೆದಾರರನ್ನು ಮತ್ತು ಇಂತಹ ಭೂ ಕಬಳಿಕೆಗೆ ಕುಮ್ಮಕ್ಕು ನೀಡುವ ಸಾರ್ವಜನಿಕ ನೌಕರರು ಸೇರಿದಂತೆ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು ಇಂತಹವರನ್ನು ಒಂದು ವರ್ಷದವರೆಗೆ ಬಂಧನದಲ್ಲಿಡಬಹುದಾಗಿದೆ. ಈ ಅಧಿನಿಯಮವನ್ನು ಸಾಮಾನ್ಯವಾಗಿ ಗೂಂಡಾ ಅಧಿನಿಯಮವೆಂದೇ ಕರೆಯಲಾಗುತ್ತದೆ ಮತ್ತು ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇದರಡಿಯಲ್ಲಿ ರೂಢಿಗತ ಅಪರಾಧಿಗಳನ್ನು ಮತ್ತು ಕಳ್ಳ ಸಾಗಣೆದಾರರನ್ನು ಮಾತ್ರ ಬಂಧಿಸಲಾಗಿದೆ. ಒಂದು ವರ್ಷದವರೆಗೆ ಬಂಧಿಸುವ ತೀವ್ರ ಪರಿಣಾಮದ ಉಪಬಂಧವನ್ನು ಭೂ ಕಬಳಿಕೆದಾರರ ವಿರುದ್ಧವು ಸಹ ಅನ್ವಯಿಸಬೇಕು.

**3. ಭಾರತ ದಂಡಸಂಹಿತೆಯಡಿಯಲ್ಲ ಅಧಿಕೃತ ದಸ್ತಾವೇಜುಗಳ ಸುಳ್ಳು ಸೃಷ್ಟಿ ಮತ್ತು ಅವುಗಳ ನಾಶಪಡಿಸುವಿಕೆಗೆ ಅಧಿಕಾರಿಗಳು ಮತ್ತು ಸರ್ಕಾರಿ ನೌಕರರ ಮೇಲೆ ಕಾನೂನು ಕ್ರಮ ಜರುಗಿಸುವುದು.**

**ಪ್ರಕರಣ 197:-**

ಕಾನೂನಿಗನುಸಾರವಾಗಿ ಕೊಡತಕ್ಕದ್ದು ಅಥವಾ ಸಹಿ ಹಾಕತಕ್ಕದ್ದು ಎಂದು ಅಗತ್ಯಪಡಿಸಲಾದ ಯಾವುದೇ ಪ್ರಮಾಣ ಪತ್ರವನ್ನು ಅಥವಾ ಯಾವ ಸಂಗತಿಗೆ ಸಂಬಂಧಿಸಿ ಒಂದು ಪ್ರಮಾಣ ಪತ್ರವನ್ನು ಕಾನೂನಿಗನುಸಾರವಾಗಿ ಸಾಕ್ಷ್ಯವಾಗಿ ಸ್ವೀಕರಿಸಲಾಗುವುದೋ ಆ ಯಾವುದೇ ಸಂಗತಿಗೆ ಸಂಬಂಧಿಸಿದಂತಹ ಪ್ರಮಾಣ ಪತ್ರವನ್ನು, ಆ ಪ್ರಮಾಣ ಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳಾಗಿರುವುದೆಂದು ತಿಳಿದೂ ಅಥವಾ ನಂಬಿದ್ದೂ, ಅಂತಹ ಪ್ರಮಾಣ ಪತ್ರವನ್ನು ಯಾರೇ ವ್ಯಕ್ತಿಯು ಕೊಟ್ಟರೆ ಅಥವಾ ಅದಕ್ಕೆ ಸಹಿ ಹಾಕಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**ಪ್ರಕರಣ 198:-**

ಯಾರೇ ವ್ಯಕ್ತಿಯ ಒಂದು ಪ್ರಮಾಣ ಪತ್ರವು ಯಾವುದೇ ಮುಖ್ಯಾಂಶದಲ್ಲಿ ಸುಳ್ಳೆಂದು ತಿಳಿದಿದ್ದು, ಅಂಥಹ ಯಾವುದೇ ಪ್ರಮಾಣ ಪತ್ರವನ್ನು ಭ್ರಷ್ಟತೆಯಿಂದ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಪ್ರಯತ್ನಿಸಿದರೆ, ಅವನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದರೆ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**ಪ್ರಕರಣ 464:-**

ಸುಳ್ಳು ದಸ್ತಾವೇಜಿನ ರಚನೆ, ಸಾಕ್ಷ್ಯ ದಸ್ತಾವೇಜುಗಳು ಸುಳ್ಳು ಸೃಷ್ಟಿಗಾಗಿ ಮತ್ತು ಅಧಿಕೃತ ದಾಖಲೆಗಳನ್ನು ನಾಶಪಡಿಸಿದಕ್ಕಾಗಿ ಸರ್ಕಾರಿ ನೌಕರರ (ಮುನಿಸಿಪಲ್ ಅಧ್ಯಕ್ಷ

ಮುಂತಾದವರಂಥಹ ಚುನಾಯಿತ ಪ್ರತಿನಿಧಿಗಳು ಸಹ ಸೇರಿದಂತೆ) ಮೇಲೆ ಕಾನೂನು ಕ್ರಮ ಜರುಗಿಸಲು ಮೇಲ್ಕಂಡವುಗಳೂ ಒಳಗೊಂಡಂತೆ ಭಾರತೀಯ ದಂಡ ಸಂಹಿತೆಯ ಹಲವಾರು ಉಪಬಂಧಗಳಲ್ಲಿ ಹೇಗೆ ದಂಡಿತನಾಗುತ್ತಿದ್ದನೋ ಅದೇ ರೀತಿ ದಂಡಿತನಾಗತಕ್ಕದ್ದು.

**4. ಈಗಿರುವ ಕಾನೂನುಗಳಿಗೆ ತಿದ್ದುಪಡಿ:-**

ಸರ್ಕಾರದ ಮತ್ತು ಸಾರ್ವಜನಿಕ ಭೂಮಿಯ ಒತ್ತುವರಿಗಳ ಕುರಿತು ವ್ಯವಹರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು, ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕಂದಾಯ ಇಲಾಖೆಗಳಿಗೆ ಸಂಬಂಧಿಸಿದ್ದು, ಪ್ರಸಕ್ತ ಕಾನೂನುಗಳಲ್ಲಿ ಹಲವಾರು ಉಪಬಂಧಗಳಿವೆ. ಆದರೆ ಈ ಉಪಬಂಧಗಳು ಕಾರಣ ಕೇಳಿ ನೋಟೀಸ್ ನೀಡುವುದಕ್ಕೆ ಅಥವಾ ಹೆಚ್ಚೆಂದರೆ ಅಂಥಹ ಒತ್ತುವರಿಗಳನ್ನು ತೆರವುಗೊಳಿಸುವುದಕ್ಕೆ ಸೀಮಿತವಾಗಿವೆ. ಕರೆಯಂಗಳ ಪ್ರದೇಶ ಅಥವಾ ಸಾರ್ವಜನಿಕ ಸ್ವತ್ತುಗಳ ಒತ್ತುವರಿಗಳಂಥಹ ಹಲವು ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆಯ ಒತ್ತುವರಿಯನ್ನು ವಾಸ್ತವವಾಗಿ ತೆರವುಗೊಳಿಸಿದಾಗ್ಯೂ ಕೂಡ, ಕೂಡಲೇ 'ಅದೇ ವ್ಯಕ್ತಿ ಅಥವಾ ಬೇರೆ ವ್ಯಕ್ತಿಗಳು ಆ ಭೂಮಿಯನ್ನು ಪುನ: ಒತ್ತುವರಿ ಮಾಡಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಆದುದರಿಂದ ಈ ಪ್ರವೃತ್ತಿಯನ್ನು ತಡೆಯುವ ಸಲುವಾಗಿ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶ ನೀಡುವ ದಂಡನೀಯ ಉಪಬಂಧಗಳನ್ನು ರೂಪಿಸುವುದು ಅತ್ಯವಶ್ಯಕವಾಗಿದೆ. ಒಬ್ಬ ವ್ಯಕ್ತಿಯು ಭೂ ಒತ್ತುವರಿ ಮಾಡಿರುವುದು ಮತ್ತು ಸರ್ಕಾರಿ ನೌಕರರು ಇದಕ್ಕೆ ದುಷ್ಪ್ರೇರಣೆ ನೀಡಿರುವುದು ಸಾಬೀತಾದಾಗ 3 ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಏಕರೂಪದ ದಂಡನೀಯ ಉಪಬಂಧಕ್ಕೆ ಅವಕಾಶ ಕಲ್ಪಿಸಲು ಕಾನೂನು ಪ್ರಕಾರ ಸಾಧ್ಯತೆಯಿದೆ. ಚಾಲ್ತಿಯಲ್ಲಿರುವ ವಿವಿಧ ಅಧಿನಿಯಮಗಳಡಿ ದಂಡನೀಯ ಉಪಬಂಧಗಳಿಗೆ ಅವಕಾಶ ಕಲ್ಪಿಸುವ ಒಂದು ವಿಧೇಯಕವನ್ನು ಸಿದ್ಧಪಡಿಸಿ, ವಿಧಾನ ಮಂಡಲದ ಮುಂದೆ ಮಂಡಿಸಬಹುದಾಗಿದೆ. ಮೂರು ವರ್ಷಗಳಿಗೆ ಮೀರದ ಕಾರಾವಾಸ ಶಿಕ್ಷೆಗಾಗಿ ದಂಡ ಪ್ರಕ್ರಿಯಾ ಸಂಹಿತಿಯ ಉಪಬಂಧಗಳಡಿ ಅವಕಾಶವಿರುವುದರಿಂದ ಕೇಂದ್ರ ಸರ್ಕಾರದ ಸಹಮತಿಯನ್ನು ಪಡೆಯುವುದು ಅಗತ್ಯವಿಲ್ಲ. ಅಂತಹ ತಿದ್ದುಪಡಿಯು ರಾಜ್ಯ ಸರ್ಕಾರದ ಸಕ್ಷಮತೆಯೊಳಗಿದ್ದು, ಅದು ಭೂ ಕಬಳಿಕೆದಾರರ ಮೇಲೆ ಯುಕ್ತ ಮತ್ತು ನಿರ್ಬಂಧಕ ಪರಿಣಾಮವನ್ನುಂಟು ಮಾಡುವುದು.

**5. ಸಾರ್ವಜನಿಕ ಅವರಣಗಳಿಂದ ಹೊರಹಾಕುವಿಕೆ ಅಧಿನಿಯಮದಡಿ ಕ್ರಮ:-**

ಸಾರ್ವಜನಿಕ ಆವರಣಗಳಿಂದ ಹೊರಹಾಕುವಿಕೆ ಅಧಿನಿಯಮದಡಿ ಸರ್ಕಾರ ಅಥವಾ ಶಾಸನಬದ್ಧ ಸಂಸ್ಥೆಯು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ತನ್ನ ಭೂಮಿ ಅಥವಾ ಕಟ್ಟಡದಿಂದ ಅನಧಿಕೃತ ಅನುಭೋಗದಾರನನ್ನು ಹೊರಹಾಕಲು ಉಪಬಂಧ ಕಲ್ಪಿಸಲಾಗಿದೆ. ಅಧಿಸೂಚಿತ ಅಧಿಕಾರಿಯು, ತನ್ನ ಮುಂದಿರುವ ದಸ್ತಾವೇಜುಗಳ ಆಧಾರದ ಮೇಲೆ ಮತ್ತು ಅನಧಿಕೃತ ಅನುಭೋಗದಾರನಿಗೆ ಯಥೋಚಿತ ನೋಟೀಸ್ ನೀಡಿದ ತರುವಾಯ, ಆ ಅನಧಿಕೃತ ಅನುಭೋಗದಾರನನ್ನು ಕ್ಷಿಪ್ರವಾಗಿ ತೆರವುಗೊಳಿಸತಕ್ಕದ್ದು. ದೀರ್ಘ ಕಾಲದಿಂದ ಈ ಉಪಬಂಧ ಜಾರಿಯಲ್ಲಿದ್ದಾಗ್ಯೂ ಕೆಲವೇ ಕೆಲವು ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿ ಅಂಥಹ ಅಧಿಕಾರಿಗಳನ್ನು ಅಧಿಸೂಚಿಸಿದೆ ಮತ್ತು ಒತ್ತುವರಿ ತೆರವಿಗಾಗಿ ಕ್ರಮಕ್ಕೆಗೊಂಡಿದೆ. ಆದ್ದರಿಂದ ಸರ್ಕಾರದ ಎಲ್ಲಾ ಇಲಾಖೆಗಳು ಮತ್ತು ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಸಹಕಾರ ಇಲಾಖೆ ಮುಂತಾದವುಗಳಂಥಹ ಶಾಸನಾತ್ಮಕ ಸಂಸ್ಥೆಗಳು, ಸರ್ಕಾರಿ ಭೂಮಿ ಅಥವಾ ಸ್ವಾಧೀನಪಡಿಸಿಕೊಂಡ ಭೂಮಿ ಒತ್ತುವರಿಯಾಗಿದ್ದರೆ ಈ ಉದ್ದೇಶಕ್ಕಾಗಿ ಒಬ್ಬ ಅಧಿಕಾರಿಯನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ಗೊತ್ತುಪಡಿಸಿ ಸರ್ಕಾರ ಅಧಿಸೂಚನೆ ಹೊರಡಿಸುವುದು ಅತ್ಯಗತ್ಯವಾಗಿದೆ.

**6. ದಂಡ ಪ್ರಕ್ರಿಯಾ ಸಂಹಿತೆಯ 133ನೇ ಪ್ರಕರಣದಡಿ ಕ್ರಮ:-**

ಈ ಪ್ರಕರಣದಡಿ ಸಹ ಉಪ ವಿಭಾಗದ ದಂಡಾಧಿಕಾರಿ (ಉಪ ವಿಭಾಗದ ಉಪ ವಿಭಾಗಾಧಿಕಾರಿ) ಅಥವಾ ಜಿಲ್ಲಾ ದಂಡಾಧಿಕಾರಿ (ಕಂದಾಯ ಜಿಲ್ಲೆಯ ಜಿಲ್ಲಾಧಿಕಾರಿ) ಅನಧಿಕೃತ ಅಧಿಬೋಗದಾರರನ್ನು ತೆರವುಗೊಳಿಸಲು ಅದೇಶಗಳನ್ನು ಹೊರಡಿಸಬಹುದು. ಮೊದಲನೆಯದಾಗಿ ಒತ್ತುವರಿದಾರನಿಗೆ ಈ ಉಪಬಂಧದಡಿ ತಾನು ಒತ್ತುವರಿದಾರನಲ್ಲ ಎಂಬುದರ ಬಗ್ಗೆ ಪುರಾವೆ ತೋರಿಸುವುದು ಆತನ ಜವಾಬ್ದಾರಿ ಮತು ಷರತ್ತುಬದ್ಧ ಅದೇಶವನ್ನು ನೀಡಬಹುದು. ಈ ಪ್ರಕರಣ ಸಾರ್ವಜನಿಕ ಉಪದ್ರವಕಾರಿ ಎಂದು ವಿವರಿಸಲಾಗಿದ್ದರೂ ಅಂಥಹ ಒತ್ತುವರಿಗಳನ್ನು ತೆರವುಗೊಳಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬಹುದು. ಈ ಉದ್ದೇಶಕ್ಕಾಗಿ ಇತರ ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳು ಸಹ ಉಪ ವಿಭಾಗೀಯ ದಂಡಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಅವರ ಮುಂದೆ ದಾಖಲೆಗಳನ್ನು ಮಂಡಿಸಿ, ಕ್ರಮಕೈಗೊಳ್ಳಬಹುದು.

**7.ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೊಕದ್ದಮೆಗಳನ್ನು ಪರಿಶೀಲಿಸುವ ಬಗ್ಗೆ:-**

ಸರ್ಕಾರಿ ಇಲಾಖೆಗಳು, ಬೆಂಗಳೂರು ಮಹಾನಗರ ಪಾಲಿಕೆ, ಬಿಡಿಎ ಮತ್ತು ವಿವಿಧ ಸಂಘ-ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವರ್ಷಗಳವರೆಗೆ ಇತ್ಯರ್ಥವಾಗದೆ ಬಾಕಿ ಉಳಿದಿವೆ. ಸರ್ಕಾರಿ ಇಲಾಖೆಗಳು ಮತ್ತು ಸಂಘ-ಸಂಸ್ಥೆಗಳು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಮುಖ ಪ್ರಕರಣಗಳನ್ನು ನಿಯತವಾಗಿ ಪರಿಶೀಲನೆ ಮಾಡುವ ಮೂಲಕ ಜಾಗೃತಿ ವಹಿಸಿ, ನ್ಯಾಯಾಲಯದ ಪ್ರಕರಣಗಳನ್ನು ಸಮರ್ಥಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿ ಇಲಾಖೆಯು ಹೊಂದಿರುವ ಕಾನೂನು ಕೋಶವನ್ನು ಸಮರ್ಥವಾಗಿ ಕಾರ್ಯನಿರ್ವಹಿಸಲು ಚುರುಕುಗೊಳಿಸುವುದು.

**8.ಸಾರ್ವಜನಿಕ ಸ್ವತ್ತಿನ ರಕ್ಷಣೆ:-**

ಒತ್ತುವರಿಗಳು ಉಂಟಾಗುವುದಕ್ಕೆ ಪ್ರಮುಖ ಕಾರಣವೆಂದರೆ ಸಾರ್ವಜನಿಕ ಸಂಘ-ಸಂಸ್ಥೆಗಳಾದಂತಹ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಧಾರ್ಮಿಕ ಮತ್ತು ದತ್ತಿ ಇಲಾಖೆ, ವಕ್ಫ್ ಮಂಡಳಿ ಮುಂತಾದವುಗಳು ತಮ್ಮ ಸ್ವತ್ತಿಗೆ ರಕ್ಷಣೆ ಮಾಡಿಕೊಳ್ಳದಿರುವುದು. ಈ ಪ್ರವೃತ್ತಿ ಬೆಂಗಳೂರು ನಗರ ಜಿಲ್ಲೆಯಲ್ಲಿ 20,000 (ಇಪ್ಪತ್ತು ಸಾವಿರ ಎಕರೆ) ಎಕರೆಗೂ ಮೀರಿದ ಭೂಮಿಯನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ರಕ್ಷಣಾ ಇಲಾಖೆಯ ಕಾರ್ಯವೈಖರಿಗೆ ವ್ಯತಿರಿಕ್ತವಾಗಿದೆ.

ಆದರೆ, ರಕ್ಷಣಾ ಇಲಾಖೆಯ ಒಂದು ಎಕರೆ ಭೂಮಿ ಕೂಡ ಒತ್ತುವರಿಗೆ ಒಳಪಟ್ಟಿಲ್ಲ, ಏಕೆಂದರೆ ಅದು ತನ್ನ ಸ್ವತ್ತಿನ ಸುತ್ತ ತಪ್ಪದೆ ಬೇಲಿಹಾಕಿ ಅದಕ್ಕೆ ರಕ್ಷಣೆಯನ್ನೊದಗಿಸುತ್ತದೆ. ಹೆಚ್ಚಿನ ಭೂಮಿಯನ್ನು ಹೊಂದಿದಾಗ್ಯೂ ಅದರಲ್ಲಿ ಬಹುತೇಕ ಭೂಮಿ ಒತ್ತುವರಿಗೆ

2028-9

ಒಳಗೊಂಡಂತೆ ಕಾರಣವಾಗಿರುವ ರಾಜ್ಯ ಸರ್ಕಾರಿ ಸಂಸ್ಥೆಗಳು ಈ ತೆರನಾದ ರಕ್ಷಣಾ ವ್ಯವಸ್ಥೆಯನ್ನು ಏನೇ ಆದರೂ ಮಾಡಿಕೊಳ್ಳುವುದು ಅಗತ್ಯವಾಗಿದೆ.

ಸಾರ್ವಜನಿಕ ಸ್ವತ್ತುಗಳ ರಕ್ಷಣೆಗಾಗಿ ಎಸ್ಟೇಟ್ ಆಫೀಸರ್ ಹುದ್ದೆಗಳು ಅವಶ್ಯಕವಾಗಿರುತ್ತವೆ. ಸದರಿ ಅಧಿಕಾರಿಗಳು ಸಾರ್ವಜನಿಕ ಸ್ವತ್ತುಗಳು ಒತ್ತುವರಿಯಾಗದಂತೆ ನೋಡಿಕೊಳ್ಳುವುದು ಮತ್ತು ಒತ್ತುವರಿಯಾದಲ್ಲಿ ತ್ವರಿತವಾಗಿ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿರುತ್ತದೆ. ಆದರೆ ಕೆಲವು ಇಲಾಖೆಗಳಲ್ಲಿ ಎಸ್ಟೇಟ್ ಆಫೀಸರ್ ಹುದ್ದೆಗಳು ಇದ್ದರೂ, ಹುದ್ದೆಗಳಿಗೆ ಯಾರನ್ನೂ ನೇಮಿಸದಿರುವುದರಿಂದ ಭೂ ಕಬಳಿಕೆ ತಡೆಯಲು ಬಹುಮಟ್ಟಿಗೆ ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ ಕನಿಷ್ಠ ಪ್ರಮುಖ ಇಲಾಖೆಗಳಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಅರಣ್ಯ, ಮುಜರಾಯಿ ಮುಂತಾದ ಸಂಸ್ಥೆಗಳಿಗೆ ಎಸ್ಟೇಟ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡುವುದು/ ಮಂಜೂರು ಮಾಡುವುದು ಅವಶ್ಯಕವಾಗಿರುತ್ತದೆ.

## 9. ಭೂ ಸ್ವಾಧೀನಗೊಂಡ ಭೂಮಿಯ ಬಳಕೆ ಬಗ್ಗೆ:-

ವಿವಿಧ ಉದ್ದೇಶಗಳಿಗಾಗಿ ಭೂ ಸ್ವಾಧೀನಪಡಿಸಿಕೊಂಡಿದ್ದು, ಅದನ್ನು 15-20 ವರ್ಷಗಳಾದರೂ ಭೂ ಸ್ವಾಧೀನಗೊಂಡ ಉದ್ದೇಶಕ್ಕೆ ಭೂ ಬಳಕೆಯಾಗದಿರುವುದರಿಂದ, ಭೂ ಒತ್ತುವರಿ/ ಕಬಳಿಕೆಗೆ ಅವಕಾಶವಾಗಿರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆಯೋ, ಆ ಉದ್ದೇಶಕ್ಕಾಗಿ ಕಾಲ ಮಿತಿಯೊಳಗೆ ಭೂ ಬಳಕೆಯಾಗುವಂತೆ ಸ್ಪಷ್ಟ ನಿಯಮಾವಳಿಯನ್ನು ರೂಪಿಸಬೇಕು.

## 10. ಭೂ ಮಂಜೂರಾತಿ ಮತ್ತು ಗುತ್ತಿಗೆ ಷರತ್ತು ಉಲ್ಲಂಘನೆ ಬಗ್ಗೆ:-

ಸರ್ಕಾರದ ವತಿಯಿಂದ ರಿಯಾಯಿತಿ ದರದಲ್ಲಿ ವಿವಿಧ ಸಾರ್ವಜನಿಕ ಉದ್ದೇಶಗಳಿಗಾಗಿ ಸರ್ಕಾರದ ಭೂಮಿಯನ್ನು ಮಂಜೂರಾತಿ/ಗುತ್ತಿಗೆಗೆ ಪಡೆದು, ವಾಣಿಜ್ಯಕ ಉದ್ದೇಶಗಳಿಗಾಗಿ ಬಳಕೆ ಮಾಡಿರುವುದು ಅಥವಾ ಮಾರಾಟ ಮಾಡಿರುವುದು ಮಂಜೂರಾತಿ ಷರತ್ತುಗಳ ಉಲ್ಲಂಘನೆಯಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಮಂಜೂರಾತಿ/ಗುತ್ತಿಗೆಯನ್ನು ರದ್ದುಪಡಿಸಿ ಭೂಮಿಯನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಳ್ಳುವುದು.

ಇನ್ನೂ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಆಸ್ತಿಯನ್ನು ಗುತ್ತಿಗೆಗೆ/ಬಾಡಿಗೆಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ನೀಡಿದ್ದು, ಗುತ್ತಿಗೆ/ಬಾಡಿಗೆ ಅವಧಿ ಪೂರ್ಣಗೊಂಡಿದ್ದರೂ, ಅವರನ್ನೇ ಮುಂದುವರೆಸಲಾಗಿದೆ. ಅಂತಹ ಸಂದರ್ಭಗಳಲ್ಲಿ ಗುತ್ತಿಗೆ/ಬಾಡಿಗೆಯನ್ನು ರದ್ದುಪಡಿಸಿ, ಆಯಾಯ ಸ್ಥಳಗಳ ಮಾರುಕಟ್ಟೆ ಬೆಲೆಯಲ್ಲಿ ಗುತ್ತಿಗೆ/ಬಾಡಿಗೆಯನ್ನು ನಿಗದಿಪಡಿಸುವುದರಿಂದ ಸರ್ಕಾರಕ್ಕೆ ಆಗುವ ಅಪಾರ ನಷ್ಟವನ್ನು ತಪ್ಪಿಸಿ, ಹೆಚ್ಚು ಆದಾಯ ಬರಲು ಕ್ರಮಕೈಗೊಳ್ಳುವುದು.

## 11.ಅಕ್ಕಪಕ್ಕದ ರಾಜ್ಯಗಳಲ್ಲಿ ಸಾರ್ವಜನಿಕ ಸ್ವತ್ತುಗಳ ರಕ್ಷಣೆ ಮಾಡುತ್ತಿರುವ ಬಗ್ಗೆ:-

ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರಸಭೆಗಳ ಅಧಿಕಾರಿಗಳು ಹೈದರಾಬಾದ್, ಚನ್ನೈ, ಮುಂಬಯಿ, ಅಹಮದಬಾದ್‌ನಂತಹ ಕೆಲವು ರಾಜ್ಯದ ರಾಜಧಾನಿ ನಗರಗಳಿಗೆ ಭೇಟಿ ನೀಡಬೇಕು ಮತ್ತು ಅಲ್ಲಿನ ಕಾರ್ಪೋರೇಷನ್‌ಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು, ಸಿ.ಎ. ನಿವೇಶನಗಳು, ಉದ್ಯಾನವನಗಳು, ಆಟದ

ಮೈದಾನಗಳು ಮುಂತಾದವುಗಳು ಸ್ವಾಧೀನದಲ್ಲಿರುವುದನ್ನು ಖಚಿತಪಡಿಸಲು ಅಸ್ತಿತ್ವದಲ್ಲಿರುವ ಕಾನೂನು ಉಪಬಂಧಗಳನ್ನು ಹೇಗೆ ಯಶಸ್ವಿಯಾಗಿ ಜಾರಿಗೊಳಿಸುತ್ತಿವೆ ಎಂಬುದನ್ನು ಮತ್ತು ಖಾತಾ ಹಾಗೂ ಕಟ್ಟಡ ನಕ್ಷೆಗಳನ್ನು ನೀಡುವಲ್ಲಿ, ರಸ್ತೆಗಳನ್ನು ಅಗಲಗೊಳಿಸುವಲ್ಲಿ, ಕೆರೆಗಳನ್ನು ಸಂರಕ್ಷಿಸುವಲ್ಲಿ ಮುಂತಾದ ಕಾರ್ಯದಲ್ಲಿ ಹೇಗೆ ಎಚ್ಚರಿಕೆ ವಹಿಸಿ ಕ್ರಮ ಜರುಗಿಸುತ್ತಿವೆ ಎಂಬುದನ್ನು ಅಧ್ಯಯನ ಮಾಡಬೇಕು.

## 12. ಗೃಹ ನಿರ್ಮಾಣ ಸಹಕಾರ ಸಂಘಗಳು ಎಸಗಿರುವ ತೀವ್ರತರವಾದ ಹಾಗೂ ಕಾನೂನು ಬಾಹಿರವಾದ ಕ್ರಮಗಳ ಬಗ್ಗೆ:-

ಕೆಲವು ಗೃಹ ನಿರ್ಮಾಣ ಸಹಕಾರ ಸಂಘಗಳು ಜಾರಿಯಲ್ಲಿರುವ ನಿಯಮಗಳಿಗೆ ವಿರುದ್ಧವಾಗಿ ವ್ಯವಸಾಯದ ಜಮೀನುಗಳನ್ನು ಖರೀದಿಸಿ, ವ್ಯವಸಾಯೇತರ ಉದ್ದೇಶಗಳಿಗಾಗಿ ಬಳಸಿರುತ್ತವೆ. ಸಂಬಂಧಿಸಿದ ಪ್ರಾಧಿಕಾರಗಳಿಂದ ಬಡಾವಣೆ ನಕ್ಷೆಗಳನ್ನು ಅನುಮೋದಿಸಿಕೊಳ್ಳದೆ, ಬಡಾವಣೆಗಳನ್ನು ರಚಿಸಿ, ಸಾರ್ವಜನಿಕ ಉದ್ದೇಶಗಳಿಗಾಗಿ ಮೀಸಲಿಡಬೇಕಾಗಿದ್ದ ಸ್ಥಳಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿರುತ್ತದೆ. ಅಷ್ಟೇ ಅಲ್ಲದೆ ಸಂಘದ ಜಮೀನನ್ನು ಜಂಟಿ ಅಭಿವೃದ್ಧಿ ಒಪ್ಪಂದಗಳ ಮೂಲಕ ಪರಭಾರೆ ಮಾಡಿದ್ದು, ಇನ್ನೂ ಕೆಲವು ಸಂದರ್ಭಗಳಲ್ಲಿ ಜಮೀನನ್ನು ಮಾರಾಟ ಮಾಡಲಾಗಿ ಕಾಯ್ದೆಗಳನ್ನು ಉಲ್ಲಂಘಿಸಲಾಗಿದೆ. ಅಂತಹ ಸಂಘಗಳ ವಿರುದ್ಧ ಸಹಕಾರ ಸಂಘಗಳ ಕಾಯ್ದೆಗನುಸಾರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಸೂಚಿಸುತ್ತದೆ.

ಈಗಾಗಲೇ ಸಂಘಗಳಲ್ಲಿ ಹಂಚಿಕೆ/ಮಾರಾಟ ಮಾಡಿರುವ ನಿವೇಶನಗಳು ಬೋಗಸ್ ಆಗಿದ್ದರೆ (ಬೋಗಸ್ ಸದಸ್ಯರುಗಳು ಸೇರಿ) ಅಥವಾ ಜಮೀನಿನ ಪರಭಾರೆಯು ಕಾಯ್ದೆಗನುಗುಣವಾಗಿಲ್ಲದಿದ್ದರೆ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಡಬೇಕಾಗಿದ್ದ ಸ್ಥಳಗಳ ದುರುಪಯೋಗವಾಗಿದ್ದರೆ, ಅಂಥಹವುಗಳನ್ನು ರದ್ದುಪಡಿಸಲು ಮತ್ತು ಮುಖ್ಯವಾಗಿ ಕಾಯ್ದೆಗನುಸಾರವಾಗಿ ಸಂಘಗಳು ಕಾರ್ಯನಿರ್ವಹಿಸಲು ನಿಗಾ ಇಡಬೇಕಾಗಿದ್ದ ಅಧಿಕಾರಿಗಳ ನಿರ್ಲಕ್ಷತೆ/ಬೇಜವಾಬ್ದಾರಿ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

## 13. ಒತ್ತುವರಿಗಳನ್ನು ನಿಯಂತ್ರಿಸಲು ಖಾಯಂ ಕಾನೂನು ಪ್ರಾಧಿಕಾರ ರಚಿಸುವ ಕುರಿತು:-

ಬೆಂಗಳೂರು ಮಹಾನಗರ ಪ್ರದೇಶವು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿದ್ದು ತ್ವರಿತವಾಗಿ ಒಟ್ಟಾರೆ ನಗರೀಕರಣದತ್ತ ಸಾಗಿದೆ. ಈಗಾಗಲೇ ಇದರ ಜನಸಂಖ್ಯೆಯು ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿ ಸುಮಾರು 8 ಮಿಲಿಯನ್ ಆಗಿದ್ದು 2020ರ ವೇಳೆಗೆ 12 ಮಿಲಿಯನ್‌ಗೂ ಹೆಚ್ಚುತ್ತದೆ. ಬೆಂಗಳೂರು ಭಾರತದ "**ಬೂಮ್‌ಸಿಟಿ**" ಎಂದು ಪರಿಣಿತವಾಗಿದೆ ಹಾಗೂ ಟೈಮ್ ಮತ್ತು ನ್ಯೂಸ್‌ವೀಕ್ ಪತ್ರಿಕೆಗಳ ಸಮೀಕ್ಷೆ ವಿಶ್ವದಲ್ಲಿ ತ್ವರಿತವಾಗಿ ಬೆಳವಣಿಗೆಯಾಗುವ ಹತ್ತು ನಗರಗಳಲ್ಲಿ ಬೆಂಗಳೂರು ಕೂಡ ಒಂದು ಎಂದು ತಿಳಿಸಲಾಗಿದೆ. ಇದಕ್ಕೆ ಕಾರಣ ಬೆಂಗಳೂರಿನ ಹಿತಕರ ಹವಾಮಾನ (ಅದು ತ್ವರಿತವಾಗಿ ಬದಲಾವಣೆ ಆಗುತ್ತಿದ್ದಾಗ್ಯೂ) ತಾಂತ್ರಿಕ ನೈಪುಣ್ಯತೆಯುಳ್ಳ ಯುವ ಪದವೀಧರರ ಲಭ್ಯತೆ, ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳು, ಜನರ ಶಾಂತ ಸ್ವಭಾವದಿಂದಾಗಿ, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಉತ್ತಮವಾಗಿರುವುದು ಮತ್ತು ಅನೇಕ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ರಿಯಲ್ ಎಸ್ಟೇಟ್ ಅಭಿವೃದ್ಧಿದಾರರು ಬೆಂಗಳೂರಿನಲ್ಲಿ ಒಟ್ಟಿಗೇ ಸೇರಿದ್ದು ಇದರಿಂದ ಮೂಲಭೂತ ಸೌಕರ್ಯ ಒದಗಿಸುವಲ್ಲಿ ಹೆಚ್ಚಿನ ಒತ್ತಡ ಉಂಟಾಗುತ್ತದೆ. ನವದೆಹಲಿ ಮತ್ತು ಮುಂಬಯಿ ನಗರಗಳ ನಂತರ ದಕ್ಷಿಣ ಭಾರತದಲ್ಲಿ ಬೆಂಗಳೂರು

ಈಗಾಗಲೇ ಅತಿ ದುಭಾರಿ ನಗರವೆಂದು ಪರಿಗಣಿತವಾಗಿದೆ. ಪ್ರಸ್ತುತ ಮತ್ತು ಮುಂದಿನ ದಶಕಗಳಲ್ಲಿ ಈ ನಗರದ ತ್ವರಿತ ಅಭಿವೃದ್ಧಿಯಿಂದಾಗಿ ಕಟ್ಟಡಗಳಿಗಾಗಿ ಭೂಮಿ ಮೇಲಿನ ಒತ್ತಡವು ಸಾಕಷ್ಟು ಹೆಚ್ಚುವುದು. ಆದುದರಿಂದ, ಲಭ್ಯವಿರುವ ಪ್ರತಿಯೊಂದು ಸರ್ಕಾರಿ ಮತ್ತು ಸಾರ್ವಜನಿಕ ಭೂಮಿ, ಲಂಗ್‌ಸ್ಪೇಸ್, ಆಟದ ಮೈದಾನಗಳು, ಕೆರೆಯಂಗಳ ಮುಂತಾದವುಗಳ ಮೇಲೆ ಒತ್ತುವರಿಗಳು ಹೆಚ್ಚುವುದು ನಿಶ್ಚಿತ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ನಗರಸಭೆಗಳು, ಪುರಸಭೆ, ಪಂಚಾಯತಿಗಳು ಮತ್ತು ಇತರೆ ಸಂಸ್ಥೆಗಳಿಂದ ಮಾತ್ರವೇ ಇಂಥಹ ಒತ್ತಡವನ್ನು ನಿಯಂತ್ರಿಸಲು ಸಾಧ್ಯವಾಗದು. ಈಗಲೂ ಕೂಡ ಭೂಮಿಯ ಒತ್ತುವರಿಯನ್ನು ತಡೆಯಲು ಬೆಂಗಳೂರು ಮಹಾನಗರ ಪಾಲಿಕೆಯು ಡಿ.ಐ.ಜಿ. ದರ್ಜೆಯ ಪೋಲೀಸ್ ಅಧಿಕಾರಿಯ ನೇತೃತ್ವದಲ್ಲಿ ಬೆಂಗಳೂರು ಮಹಾನಗರ ಕಾರ್ಯಪಡೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಎಸ್.ಪಿ.ದರ್ಜೆಯ ಪೋಲೀಸ್ ಅಧಿಕಾರಿ ನೇತೃತ್ವದ ಜಾಗೃತ ವಿಭಾಗವನ್ನು, ಕಂದಾಯ ಇಲಾಖೆಯು ಉಪವಿಭಾಗಾಧಿಕಾರಿಯ ನೇತೃತ್ವದಲ್ಲಿ ಭೂ ಒತ್ತುವರಿಗಳ ತಡೆ ಘಟಕವನ್ನು ಹೊಂದಿವೆ. ಆದರೆ, ಪ್ರತಿ ಸಂಸ್ಥೆಯು ತನ್ನ ಕೆಲಸಕಾರ್ಯವನ್ನು ಪ್ರತ್ಯೇಕವಾಗಿ ನಿರ್ವಹಿಸುತ್ತಿವೆ ಮತ್ತು ಯಾವುದೇ ಒಂದು ಸಂಸ್ಥೆಯು ಸರ್ಕಾರದ ಮತ್ತು ಸಾರ್ವಜನಿಕ ಭೂಮಿಯನ್ನು ಮತ್ತು ಸ್ವತ್ತಿನ ಕಾನೂನು ಬಾಹಿರ ಅನುಬೋಗದಾರಿಕೆಯನ್ನು ತಡೆಗಟ್ಟಲು ಯಾವುದೇ ರೀತಿಯ ಪರಿಣಾಮಕಾರಿ ಕ್ರಮ ಕೈಗೊಳ್ಳಲು ಸಮರ್ಥವಾಗಿಲ್ಲ.

ಆದುದರಿಂದ ಭೂಮಿಯ ಮತ್ತು ಸಾರ್ವಜನಿಕ ಸ್ವತ್ತುಗಳ ಒತ್ತುವರಿ ಹಾಗೂ ದುರ್ಭಳಕೆಯನ್ನು ತಡೆಗಟ್ಟಲು ಒಂದು ಖಾಯಂ ಕಾನೂನು ಪ್ರಾಧಿಕಾರವನ್ನು ರಚಿಸುವುದು ಅವಶ್ಯಕವಾಗಿದೆ. ಈ ಪ್ರಾಧಿಕಾರವು ಒತ್ತುವರಿ ಸಮಸ್ಯೆಯನ್ನು ಗುರುತಿಸಲು, ತೆರವುಗೊಳಿಸಲು ಮತ್ತು ಆ ಬಗ್ಗೆ ಪರಿಣಾಮಕಾರಿಯಾಗಿ ವ್ಯವಹರಿಸಿ, ನಿರ್ಬಂಧ ಕ್ರಮಗಳನ್ನು ಕೈಗೊಳ್ಳಲು ಕಾನೂನುಬದ್ಧ ಅಧಿಕಾರ ಹೊಂದಿರತಕ್ಕದ್ದು. ಈ ಪ್ರಾಧಿಕಾರಕ್ಕೆ, ಸರ್ಕಾರದ ಮತ್ತು ಶಾಸನಬದ್ಧ ಸಂಸ್ಥೆ ಸ್ವತ್ತುಗಳ ಒತ್ತುವರಿಗೆ ಸಂಬಂಧಿಸಿದಂತೆ ಅದು ಯುಕ್ತವೆಂದು ಭಾವಿಸುವ ಯಾರೇ ವ್ಯಕ್ತಿ ಸರ್ಕಾರಿ ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳಿಂದ ಮಾಹಿತಿಯನ್ನು ಅಗತ್ಯಪಡಿಸಲು ಮತ್ತು ಪಡೆಯಲು ಅಧಿಕಾರಗಳಿರತಕ್ಕದ್ದು. ಈ ಪ್ರಾಧಿಕಾರವು ಮೇಲ್ನೋಟದ ಆಧಾರದ ಮೇಲೆ ವಿಚಾರಣೆ ನಡೆಸಲು ಮತ್ತು ಪ್ರಕರಣಗಳನ್ನು ದಾಖಲು ಮಾಡಲು ನ್ಯಾಯಾಲಯಕ್ಕಿರುವ ಅಧಿಕಾರಗಳನ್ನು ಹೊಂದಿರತಕ್ಕದ್ದು. ಈ ಪ್ರಾಧಿಕಾರವು ಕರ್ನಾಟಕ ಪೋಲೀಸ್ ಅಧಿನಿಯಮ ಮತ್ತು ಭೂ ಕಂದಾಯ ಅಧಿನಿಯಮ, ಸಾರ್ವಜನಿಕ ಆವರಣಗಳಿಂದ ಹೊರಹಾಕುವ ಅಧಿನಿಯಮ, ಸಹಕಾರ ಸಂಘಗಳ ಅಧಿನಿಯಮ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ, ಕರ್ನಾಟಕ ಗೃಹ ಮಂಡಳಿ ಅಧಿನಿಯಮ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪಾಲಿಕೆ, ಬಿ.ಎಂ.ಆರ್.ಡಿ.ಎ., ನಗರಸಭೆ, ಪುರಸಭೆ ಗ್ರಾಮ ಮತ್ತು ಪಟ್ಟಣ ಪಂಚಾಯ್ತಿಗಳ ಅಧಿನಿಯಮ ಮುಂತಾದಂಥಹ ಇತರ ಅಧಿನಿಯಮಗಳಡಿಯಲ್ಲಿ ಅಧಿಕಾರಗಳನ್ನು ಹೊಂದಿರತಕ್ಕದ್ದು. ಈ ಪ್ರಾಧಿಕಾರಕ್ಕೆ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಇಲ್ಲವೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ದರ್ಜೆಯ ವ್ಯಕ್ತಿಗಳು ಮುಖ್ಯಸ್ಥರಾಗಿರತಕ್ಕದ್ದು ಮತ್ತು ಇದು ಸಾಕಷ್ಟು ಪೋಲೀಸ್ ಹಾಗೂ ಆಡಳಿತಾತ್ಮಕ ಸಿಬ್ಬಂದಿ ವರ್ಗವನ್ನು ಹೊಂದಿರತಕ್ಕದ್ದು.

**14. ಜಂಟಿ ಸದನ ಸಮಿತಿಯ ವರದಿ ಮತ್ತು ಶಿಫಾರಸ್ಸುಗಳನ್ನು ಸಮರ್ಪಕವಾಗಿ ಜಾರಿಗೊಳಸಲು ಒಬ್ಬ ಅಧಿಕಾರಿಯನ್ನು ನಿರ್ಧಿಷ್ಟಪಡಿಸುವ ಬಗ್ಗೆ:-**

ಜಂಟಿ ಸದನ ಸಮಿತಿಯು ಭೂ ಒತ್ತುವರಿಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ವರದಿ ಮತ್ತು ಪರಿಗಣಿತ ಶಿಫಾರಸ್ಸುಗಳನ್ನು ಮಧ್ಯಂತರ ವರದಿ ಭಾಗ-1ರಲ್ಲಿ ನೀಡಿರುತ್ತದೆ. ಸಮಿತಿಯ ವರದಿ ಮತ್ತು ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಅವಶ್ಯಕವಾಗಿರುವುದರಿಂದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಒಬ್ಬರು ಉನ್ನತ ಅಧಿಕಾರಿಯನ್ನು ಈ ಉದ್ದೇಶಕ್ಕೆ ನಿರ್ಧಿಷ್ಟಪಡಿಸಿ ಆದೇಶ ಹೊರಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**ಎ.ಟಿ. ರಾಮಸ್ವಾಮಿ**
ಅಧ್ಯಕ್ಷರು
ಜಂಟಿ ಸದನ ಸಮಿತಿ
ಬೆಂಗಳೂರು ನಗರ/ನಗರ ಜಿಲ್ಲೆಯಲ್ಲಿ
ಸರ್ಕಾರಿ ಜಮೀನು ಒತ್ತುವರಿ ಕುರಿತು.

**ಡಿಸೋಜಾ ರಾಬಿನ್‌ಸನ್**
ಪ್ರಧಾನ ಕಾರ್ಯದರ್ಶಿ.

2028-10

## ಅಧ್ಯಾಯ – 13.

## ಶಿಫಾರಸ್ಸುಗಳು

ಮೇಲಿನ ಅಧ್ಯಾಯಗಳಲ್ಲಿ ಒತ್ತುವರಿಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಹಲವಾರು ಶಿಫಾರಸ್ಸುಗಳನ್ನು ಮಾಡಲಾಗಿದೆ. ಅವುಗಳ ಪೈಕಿ, ಸರ್ಕಾರದಿಂದ ನೇಮಕಗೊಂಡ ಸಮಿತಿ ಅಥವಾ ಕಾರ್ಯಪಡೆಗಳು ಪರಿಣಾಮಕಾರಿಯಾಗಿಲ್ಲದ ಕಾರಣ ಶಾಶ್ವತ ಸ್ವರೂಪದ ವಿಧಾನ ಮಂಡಲ ಸಮಿತಿಯೊಂದನ್ನು ರಚಿಸಬೇಕೆನ್ನುವ ಶಿಫಾರಸ್ಸಿನ ಜೊತೆಗೆ ಈ ಮುಂದಿನವುಗಳಿಗೆ ಹೆಚ್ಚು ಒತ್ತುಕೊಡಲಾಗಿದೆ.

### 1. ಸರ್ಕಾರಿ ಜಮೀನುಗಳ ಸಂರಕ್ಷಣೆಗಾಗಿ ಖಾಯಂ ಸ್ವರೂಪದ, ವಿಧಾನ ಮಂಡಲ ಸಮಿತಿ

ಗೋಮಾಳ, ದೊಡ್ಡ–ಚಿಕ್ಕ ಕೆರೆಗಳು, ಗುಂಡುತೋಪು, ಸ್ಮಶಾನಗಳೇ ಮುಂತಾದ ಸರ್ಕಾರಿ ಜಮೀನುಗಳ ಒತ್ತುವರಿಯ ಸಮಸ್ಯೆಯು ತೀರ ಗಂಭೀರ ಸ್ವರೂಪದ್ದಾಗಿದೆ. ಹರಿಯಾಣದ ಪ್ರಕರಣವೊಂದರಲ್ಲಿ ಸರ್ವೋಚ್ಛ ನ್ಯಾಯಾಲಯವು, ಈ ಸಮುದಾಯ ಭೂಮಿಗಳು ಸಾರ್ವಜನಿಕ ಉಪಯೋಗದ ಸಲುವಾಗಿರುವ ಅಮೂಲ್ಯ ಜಮೀನುಗಳಾಗಿರುವ ಕಾರಣ, ಇವುಗಳನ್ನು ಹೇಗಾದರೂ ಮಾಡಿ ರಕ್ಷಿಸಲೇ ಬೇಕೆಂದು ಅಭಿಪ್ರಾಯಪಟ್ಟಿತು. ಮತ್ತು ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಯವರು ಭೂ ಒತ್ತುವರಿಗಳನ್ನು ತೆರವು ಮಾಡುವಲ್ಲಿ ತಾವು ಕೈಗೊಂಡ ಕ್ರಮದ ಬಗ್ಗೆ ತ್ರೈಮಾಸಿಕ ವರದಿಗಳನ್ನು ಸಲ್ಲಿಸುವಂತೆ ನಿರ್ದೇಶಿಸಿತು. ಕರ್ನಾಟಕದಲ್ಲಂತೂ ಈ ಸಮಸ್ಯೆ ಇನ್ನೂ ಆತಂಕಕಾರಿಯಾಗಿದೆ. ಏಕೆಂದರೆ ಪಶ್ಚಿಮಘಟ್ಟ ಜಿಲ್ಲೆಗಳಲ್ಲಿನ ವೃಕ್ಷನಿಬಿಡ ಅರಣ್ಯಗಳ 104,000 ಎಕರೆಗಳೂ ಸೇರಿದಂತೆ ಕನಿಷ್ಟ 12 ಲಕ್ಷ ಎಕರೆಗಳನ್ನು ಒತ್ತುವರಿಗೊಳಗಾದ ಪ್ರದೇಶವೆಂದು ಗುರುತಿಸಲಾಗಿದ್ದರೂ, ಬೃಹತ್ ಒತ್ತುವರಿಕಾರರಿಂದ ಈ ಜಮೀನುಗಳನ್ನು ಮರಳಿಪಡೆಯುವ ನಿಟ್ಟಿನಲ್ಲಿ ಏನೆಂದರೆ ಏನೂ ಕ್ರಮವನ್ನು ಕೈಗೊಂಡಿರುವುದಿಲ್ಲ. ಅಧಿಕಾರಿಗಳ ಮೇಲೆ ಯಾವುದೇ ಕಾನೂನುಬದ್ಧ ಅಧಿಕಾರ ಅಥವಾ ನಿಯಂತ್ರಣವಿಲ್ಲದ ಒಂದು ಅನೌಪಚಾರಿಕ ಸಮಿತಿಯಷ್ಟೇ ಆಗಿರುವಂಥ ಕಾರ್ಯಪಡೆಯು, 50,000 ಎಕರೆಗಳಿಗಿಂತಲೂ ಕಡಿಮೆ ಪ್ರಮಾಣದ ಗೋಮಾಳ ಮತ್ತು ಕೆರೆಯಂಗಳಗಳ ಒತ್ತುವರಿ ಪ್ರದೇಶವನ್ನು ಮರಳಿ ಪಡೆಯುವಂತೆ ಡೆಪ್ಯುಟಿ ಕಮೀಷನರುಗಳನ್ನು ಒತ್ತಾಯಪಡಿಸುವಲ್ಲಿ ಸಮರ್ಥವಾಗಿದೆ. ಒತ್ತುವರಿಗೊಳಗಾದ ಒಟ್ಟು ಸರ್ಕಾರಿ ಜಮೀನಿನ 5%ಕ್ಕಿಂತಲೂ ಇದು ಕಡಿಮೆ ಹೀಗಾಗಿ ಈ ಅಮೂಲ್ಯ ಸಮುದಾಯ ಭೂಮಿಗಳನ್ನು

ಸಂರಕ್ಷಿಸಬೇಕಾದರೆ, ಸಾರ್ವಜನಿಕ ಲೆಕ್ಕ ಸಮಿತಿ, ಸಾರ್ವಜನಿಕ ಉದ್ಯಮಗಳ ಸಮಿತಿ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಗಳ ರೀತಿಯಲ್ಲಿ ಒಂದು ಖಾಯಂ ಸ್ವರೂಪದ ಜಂಟಿ ವಿಧಾನ ಮಂಡಲ ಸಮಿತಿಯನ್ನು ರಚಿಸಬೇಕಾಗುತ್ತದೆ. ಸರ್ಕಾರಿ ಜಮೀನು ಸಂರಕ್ಷಣೆಗಾಗಿರುವ ಈ ಜಂಟಿ ವಿಧಾನ ಮಂಡಲ ಸಮಿತಿಯು ಎಲ್ಲಾ ಸರ್ಕಾರಿ ಮತ್ತು ಸಾರ್ವಜನಿಕ ಜಮೀನುಗಳ ಸಂಬಂಧದ ದೂರುಗಳನ್ನು ವ್ಯವಹರಿಸಲು ಅಧಿಕಾರ ಹೊಂದಿರಬೇಕು. ಕಂದಾಯ ಕಾರ್ಯದರ್ಶಿ ಮತ್ತು ವ್ಯವಸ್ಥಾಪಕ ನಿರ್ದೇಶಕರು ಮುಖ್ಯಸ್ಥರಾಗಿರುವ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವು ಕೆಪಿಎಲ್‌ಸಿಯು ಈ ವಿಧಾನ ಮಂಡಲ ಸಮಿತಿಗೆ ಖಾಯಂ ಸಚಿವಾಲಯವಾಗಿರಬೇಕು. ಒತ್ತುವರಿಗಳನ್ನು ತೆರವುಗೊಳಿಸುವ ಮತ್ತು ಹಿಂದಕ್ಕೆ ಪಡೆದ ತರುವಾಯ ಅಂಥ ಜಮೀನುಗಳನ್ನು ರಕ್ಷಿಸುವ ಅಧಿಕಾರಗಳು ಸಹ ಜಂಟಿ ವಿಧಾನ ಸಮಿತಿಯ ಅಡಿಯಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮಕ್ಕೆ ಇರಬೇಕು. ಕ.ಸಾ.ಭೂ.ನಿಗಮಕ್ಕೆ ಸಾಕಷ್ಟು ಅಧಿಕಾರ ನೀಡಬೇಕಾದರೆ ಮೇಲ್ದರ್ಜೆಗೇರಿಸಿದ ಹುದ್ದೆಯ ಪ್ರಧಾನ ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಬೇಕು. ಅವರು ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರು ಆಗಿರಬೇಕು.

## ೨. ಸರ್ಕಾರಿ ಜಮೀನುಗಳ ಸಂರಕ್ಷಣೆಯ ಬಗ್ಗೆ ಸರ್ಕಾರದ ಕಾರ್ಯದರ್ಶಿಯವರಿಂದ ನಿಯತ ಪುನರವಲೋಕನ.

ಪ್ರಸಕ್ತ, ಡೆಪ್ಯುಟಿ ಕಮೀಷನರುಗಳು ಮತ್ತು ಇಲಾಖಾ ಮುಖ್ಯಸ್ಥರು ಹಾಗೂ ಶಾಸನಬದ್ಧ ನಿಕಾಯಗಳ, ಸ್ಥಳೀಯ ಮ್ಯುನಿಸಿಪಲ್ ನಿಕಾಯಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಅಧೀನದಲ್ಲಿರುವ ಸರ್ಕಾರಿ ಜಮೀನುಗಳ ಬಗ್ಗೆ ಆದ್ಯ ಗಮನ ಕೊಡುವುದಿಲ್ಲ. ಸಾಂಪ್ರದಾಯಿಕ ಜಮಾಬಂದಿ ಪದ್ಧತಿಯನ್ನು ಕೈಬಿಟ್ಟ ತರುವಾಯ, ಕಂದಾಯ ಇಲಾಖೆಯು ಸರ್ಕಾರಿ ಜಮೀನುಗಳ ಮತ್ತು ಅವುಗಳ ಒತ್ತುವರಿಯ ಬಗ್ಗೆ ನಿಗಾ ವಹಿಸುತ್ತಿಲ್ಲ. ಮ್ಯುನಿಸಿಪಲ್ ಕಾರ್ಪೊರೇಷನ್‌ಗಳು, ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ಗಳು, ಟೌನ್ ಮ್ಯುನಿಸಿಪಲ್ ಕೌನ್ಸಿಲ್‌ಗಳು, ಟೌನ್ ಪಂಚಾಯತಿಗಳು ಮತ್ತು ಇತರ ಶಾಸನಬದ್ಧ ನಿಕಾಯಗಳು ಇಂದಿನವರೆಗಿನ ಸ್ವತ್ತು ರಿಜಿಸ್ಟರುಗಳನ್ನು ಇಟ್ಟಿರುವುದಿಲ್ಲ. ತಮ್ಮ ಜಮೀನು ಮತ್ತು ಸ್ವತ್ತುಗಳ ಪ್ರಮಾಣವೆಷ್ಟೆಂಬುದನ್ನೂ ಅವುಗಳು ತಿಳಿದಿರುವುದಿಲ್ಲ. ಅರಣ್ಯ ಇಲಾಖೆಯು ಸರ್ವೋಚ್ಚ ನ್ಯಾಯಾಲಯವು ಗೋದವರ್ಮನ್ ತಿರುಮಲಪಾಡ್ ಪ್ರಕರಣದಲ್ಲಿ ನೀಡಿದಂಥ ಅದ್ವಿತೀಯ ತೀರ್ಪನ್ನು ಒಂದು ಅನುಷ್ಠಾನವೆಂಬಂತೆ ನಿಯತಕಾಲಿಕವಾಗಿ ಮನನ ಮಾಡಬೇಕಿತ್ತು. ಬದಲಿಗೆ, ಅರಣ್ಯ ಭೂಮಿಗಳನ್ನು ಸಂರಕ್ಷಿಸುವ ವಿಚಾರದಲ್ಲಿ ಇಲಾಖೆಯು ವಿಚಿತ್ರ ಸ್ವರೂಪದ ಅನಿಚ್ಛೆಯನ್ನು ತೋರಿಸುತ್ತಿದೆ. ಮುಜರಾಯಿ

ಇಲಾಖೆಯ ಅಧೀನದಲ್ಲಿರುವ ಸಂಸ್ಥೆಗಳಿಗೆ ಸೇರಿದಂಥ ಹೆಚ್ಚಿನ ಜಮೀನುಗಳು ಒತ್ತುವರಿದಾರರ ವಶವಾಗಿವೆ. ತನ್ನ ಸ್ವತ್ತನ್ನು ರಕ್ಷಿಸಲು ಬೇಕಾದ ಯಾವುದೇ ಸಿಬ್ಬಂದಿಯನ್ನು ಇಲಾಖೆಯು ಹೊಂದಿರುವುದಿಲ್ಲ.

ಆದ್ದರಿಂದ, ಖಾಯಂ ಸ್ವರೂಪದ ಒಂದು ವಿಧಾನ ಮಂಡಲ ಸಮಿತಿಯನ್ನು ರಚಿಸುವುದರ ಜೊತೆಗೆ, ತಮ್ಮಲ್ಲಿ ನಿಹಿತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಒತ್ತುವರಿದಾರರನ್ನು ಗುರುತಿಸಿ, ಕಾನೂನು ವ್ಯವಹಾರಣೆಗೆ ಒಳಪಡಿಸುವಂತೆ ಹಾಗೂ ಹಿಂದಕ್ಕೆ ಪಡೆದ ಜಮೀನುಗಳನ್ನು ಬೇಲಿಹಾಕಿ ರಕ್ಷಿಸುವಂತೆ ಸರ್ಕಾರವು ಪ್ರಾದೇಶಿಕ ಕಮೀಷನರುಗಳು, ಡೆಪ್ಯುಟಿ ಕಮೀಷನರುಗಳು, ಕಂದಾಯ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರು, ಮತ್ತು ಶಾಸನಬದ್ಧ ಮತ್ತು ಸ್ಥಳೀಯ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಸರ್ಕಾರದ ಕಾರ್ಯದರ್ಶಿಗಳು ಪ್ರತಿ ತಿಂಗಳೂ ಸ್ಥಿತಿಗತಿಗಳ ಬಗ್ಗೆ ಪುನರವಲೋಕನ ನಡೆಸಬೇಕು. ಹಾಗೂ ಮೇಲೆ ಹೇಳಿದ ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಹಾಗೂ ಮೇಲೆ ಹೇಳಿದ ಅಧಿಕಾರಿಗಳ ವಾರ್ಷಿಕ ರಹಸ್ಯ ವರದಿಗಳನ್ನು ಬರೆಯುವ ಸಂದರ್ಭದಲ್ಲಿ ಅವರು ಈ ಸಂಬಂಧದಲ್ಲಿ ನಿರ್ವಹಿಸಿದ ಕಾರ್ಯದ ಬಗ್ಗೆ ನಮೂದಿಸಬೇಕು.

## ೩. ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು, ಭೂ ಕಬಳಿಕೆ (ನಿಷೇಧ) ಅಧಿನಿಯಮ, ೨೦೦೭ನ್ನು ಅನುಷ್ಠಾನಕ್ಕೆ ತರುವುದು.

ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು 2007 ರಲ್ಲಿ ಅವಿರೋಧವಾಗಿ ಅಂಗೀಕರಿಸಿದ ಈ ವಿಧೇಯಕವು, ಸಂಬಂಧಪಟ್ಟ ಇಲಾಖೆಯಾದ ಕಂದಾಯ ಇಲಾಖೆಯು ಕೇಂದ್ರ ಗೃಹ ಇಲಾಖೆಯನ್ನು ಒತ್ತಾಯಪಡಿಸಿ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯುವಲ್ಲಿ ಯಾವುದೇ ಕ್ರಮ ಕೈಗೊಂಡಿರದ ಕಾರಣ, ಕಳೆದ ನಾಲ್ಕು ವರ್ಷಗಳಿಂದಲೂ ವಿಧೇಯಕವಾಗಿಯೇ ಉಳಿದಿದೆ. ಇದಕ್ಕೆ ವ್ಯತಿರಿಕ್ತವಾಗಿ, ಆಂಧ್ರಪ್ರದೇಶವು 1984 ರಲ್ಲೇ ಆಂಧ್ರಪ್ರದೇಶ ಭೂ ಕಬಳಿಕೆ (ನಿಷೇಧ) ಅಧಿನಿಯಮವನ್ನು ಅಂಗೀಕರಿಸಿದ್ದು, (ಇದಾದ ತರುವಾಯ ಕರ್ನಾಟಕ ವಿಧೇಯಕವನ್ನು ರೂಪಿಸಲಾಗಿತ್ತು.) ಎಲ್ಲ ಒತ್ತುವರಿ ಪ್ರಕರಣಗಳ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿತು. ಇದರಿಂದಾಗಿ ಒತ್ತುವರಿದಾರರು ಸರ್ಕಾರವನ್ನು ವಿವಿಧ ನ್ಯಾಯಾಲಯಗಳ ಮುಂದೆ ಬಹಳಷ್ಟು ವ್ಯಾಜ್ಯಗಳಲ್ಲಿ ಸಿಲುಕಿಸುವುದನ್ನು ತಪ್ಪಿಸಿದಂತಾಗಿದೆ.

ಆದ್ದರಿಂದ ಸಂಬಂಧಪಟ್ಟ ಕಾರ್ಯದರ್ಶಿಯವರು, ಭಾರತ ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಿ, ಈ ಸಂಬಂಧದಲ್ಲಿ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯುವಂತೆ ಮತ್ತು ಕರ್ನಾಟಕದಲ್ಲಿ ವಿಶೇಷ

ನ್ಯಾಯಾಲಯವು ಸ್ಥಾಪಿತವಾಗಲು ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿಯವರು ನಿರ್ದೇಶನ ನೀಡಬೇಕು.

## 4. ಕಂದಾಯ, ಅರಣ್ಯ, ಮುಜರಾಯಿ ಮತ್ತು ವಕ್ಫ್ ಇಲಾಖೆಗಳಲ್ಲಿ ಸರ್ಕಾರಿ ಜಮೀನು ಪ್ರಕರಣಗಳ ಪ್ರತಿರಕ್ಷೆಗಾಗಿ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿರುವಂತೆಯೇ ಒಂದು ಕಾನೂನು ವಿಭಾಗವನ್ನು ರಚಿಸುವುದು.

ಸರ್ಕಾರಿ ಸಚಿವಾಲಯಗಳಲ್ಲಿ ಈಗಿರುವಂಥ ಏಕವ್ಯಕ್ತಿ (ಭಾಗಶಃ) ಕಾನೂನು ವಿಭಾಗಗಳು, ಸಿವಿಲ್ ನ್ಯಾಯಾಲಯಗಳಲ್ಲಿ ಮತ್ತು ಮೇಲಿನ ನ್ಯಾಯಾಲಯಗಳಲ್ಲಿ ಜಮೀನು ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಪ್ರತಿರಕ್ಷಿಸಲು ಸಮರ್ಥವಾಗಿಲ್ಲ. ತಮ್ಮ ಅಧೀನದಲ್ಲಿ ಬೃಹತ್ ಪ್ರಮಾಣದ ಜಮೀನನ್ನು ಹೊಂದಿರುವಂಥ ಕಂದಾಯ, ಅರಣ್ಯ, ಮುಜರಾಯಿ ಮತ್ತು ವಕ್ಫ್ ಇಲಾಖೆಗಳಂಥ ಪ್ರಮುಖ ಇಲಾಖೆಗಳು, ವಾಣಿಜ್ಯ ತೆರಿಗೆ ಇಲಾಖೆಯಿಲ್ಲರುವ ರೀತಿಯಲ್ಲಿ ಇಲಾಖಾ ಮುಖ್ಯಸ್ಥರ ಹಂತದಲ್ಲಿ (ಕಂದಾಯ ಇಲಾಖೆಯ ವಿಚಾರದಲ್ಲಿ ಪ್ರಾದೇಶಿಕ ಕಮಿಷನರುಗಳ ಹಂತದಲ್ಲಿ) ಕಾನೂನು ವಿಭಾಗಗಳನ್ನು ನಿಯೋಜಿಸಬೇಕು. ಈ ಉದ್ದೇಶಕ್ಕಾಗಿ ಇದಕ್ಕೆ ಯಾವುದೇ ಹೊಸ ಸಿಬ್ಬಂದಿಯ ಅಗತ್ಯವಿರುವುದಿಲ್ಲ. ಪ್ರತಿ ಇಲಾಖೆಯ ಸಿಬ್ಬಂದಿಯಿಂದಲೇ ಇಂಥ ಕಾನೂನು ವಿಭಾಗಗಳನ್ನು ಸ್ಥಾಪಿಸಬಹುದು. ಪ್ಯಾರಾವಾರು ಷರಾಗಳಿಗೆ ಕರಡು ಉತ್ತರಗಳು, ಸರಿಯಾದ ವಸ್ತುಸ್ಥಿತಿ, ಅಫಿಡಾವಿತ್ತುಗಳನ್ನು ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳ ಹಾಜರಾತಿ ಇತ್ಯಾದಿ ಸಂಪೂರ್ಣವಾಗಿ ಆಡಳಿತ ರೂಪದ ಕಾರ್ಯವಿಚಾರಗಳು ಸರ್ಕಾರಿ ವಕೀಲರಿಗೆ ಲಭ್ಯವಾಗದ ಕಾರಣ ಸರ್ಕಾರದ ಹೆಚ್ಚಿನ ಪ್ರಕರಣಗಳು ವಿಫಲವಾಗುತ್ತವೆ.

ಆದ್ದರಿಂದ ಜಮೀನು ಹೊಂದಿರುವಂಥ ಪ್ರಮುಖ ಇಲಾಖೆಗಳಲ್ಲಿ ಕಾನೂನು ವಿಭಾಗಗಳನ್ನು ಸಂಘಟಿಸಬೇಕು ಮತ್ತು ಜಮೀನು ವಿಚಾರಗಳಿಗಾಗಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿರುವಂತೆ ಕರ್ನಾಟಕ ಅಪೀಲು ನ್ಯಾಯಾಧೀಕರಣ ಮತ್ತು ಉಚ್ಚ ನ್ಯಾಯಾಲಯದಲ್ಲಿ ಪ್ರತ್ಯೇಕವಾಗಿ ನ್ಯಾಯ ಪೀಠಗಳನ್ನು ರಚಿಸಬೇಕು.

## 5. ಬೆಂಗಳೂರು ನಗರ ಜಿಲ್ಲೆಯಲ್ಲಿ, ಕಂದಾಯ ಇಲಾಖೆಯ ವಿಶೇಷ ಡೆಪ್ಯೂಟಿ ಕಮಿಷನರಾಗಿ ಭಾರತೀಯ ಆಡಳಿತ ಸೇವೆಗೆ ಸೇರಿದ ಚಿಕ್ಕವಯಸ್ಸಿನ ಅಧಿಕಾರಿಗಳನ್ನು ನೇಮಕ ಮಾಡುವುದು.

ಮೇಲೆ ಅಧ್ಯಾಯ 10–ಡಿಯ ಪ್ಯಾರಾ 11 ರಲ್ಲಿ ಹೇಳಿದಂತೆ, ಸಕ್ಷಮತೆ ಮತ್ತು ಪ್ರಾಮಾಣಿಕತೆ ಎರಡರಲ್ಲೂ ಕೊರತೆಯಿರುವ ಅಧಿಕಾರಿಗಳನ್ನು ಬಾಹ್ಯ ಪ್ರತಿಫಲಕ್ಕಾಗಿ ಬೆಂಗಳೂರು ನಗರ ಜಿಲ್ಲೆಗೆ ನೇಮಕ

ಮಾಡಲಾಗುತ್ತದೆ. ಭೂಮಿಯ ಬೆಲೆ ತೀರ ದುಬಾರಿಯಾಗಿರುವ ಬೆಂಗಳೂರು ನಗರ ಪ್ರದೇಶಗಳಲ್ಲಿ ಈ ಅಧಿಕಾರಿಗಳಿಂದ ಆಗುತ್ತಿರುವ ಹಾನಿ ಅಷ್ಟಿಷ್ಟಲ್ಲ. ಒಮ್ಮೆ ಆದ ಹಾನಿಯನ್ನು ಸರಿಪಡಿಸುವುದಂತೂ ಸಾಧ್ಯವೇ ಇಲ್ಲ. ಒಬ್ಬ ವಿಶೇಷ ಡೆಪ್ಯೂಟಿ ಕಮಿಷನರನ್ನು ಮತ್ತು ಒಬ್ಬ ವಿಶೇಷ ತಹಶೀಲ್ದಾರ್‌ನನ್ನು ಭ್ರಷ್ಟತಾ ವಿರೋಧ ಅಧಿನಿಯಮದ ಅಡಿಯಲ್ಲಿ ಲೋಕ ಆಯುಕ್ತರು ಬಂಧಿಸಿದ್ದು, ಈಗ ಅವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. ಅಧ್ಯಾಯ–6ರ ಪ್ಯಾರಾ 20 ರಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮದ 136(3) ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಕಾನೂನು ಬಾಹಿರ ಆದೇಶಗಳ ಪ್ರಕರಣಗಳಲ್ಲಿ 1,500 ಕೋಟಿ ರೂ. ಮೌಲ್ಯವೆಂದು ಲೆಕ್ಕ ಹಾಕಲಾದ 1400 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಈ ವಿಶೇಷ ಡೆಪ್ಯೂಟಿ ಕಮಿಷನರು ಹೊರಡಿಸಿದ 428 ರಷ್ಟು ಆದೇಶಗಳನ್ನು ಪರಿಶೀಲಿಸಬೇಕಾಯಿತು. ಅವೆಲ್ಲವುಗಳೂ ಕಾನೂನು ಬಾಹಿರವೆಂದು ಕಂಡು ಬಂದಾಗ ಅವುಗಳ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಹೂಡಬೇಕಾಯಿತು.

ಉಚ್ಚ ನ್ಯಾಯಾಲಯವು ಇತ್ತೀಚೆಗೆ ಹಲವು ಪ್ರಕರಣಗಳಲ್ಲಿ ಟೀಕೆಗಳನ್ನು ಹೊರಡಿಸಿರುತ್ತದೆ. ಒಂದು ಪ್ರಕರಣದಲ್ಲಿ ಗೌರವಾನ್ವಿತ ನ್ಯಾಯಾಲಯವು ವಿಶೇಷ ಡೆಪ್ಯೂಟಿ ಕಮಿಷನರ್ ಹುದ್ದೆಯನ್ನೇ ರದ್ದುಗೊಳಿಸಬೇಕೆಂದು ಖೇದದಿಂದ ಅಭಿಪ್ರಾಯ ನೀಡಿದ್ದು, ಅನುಬಂಧ 14ರಲ್ಲಿ ತೋರಿಸಿರುವಂತೆ, ಅರೆ ನ್ಯಾಯಾಂಗ ವಿಚಾರಗಳ ಬಗ್ಗೆ ವ್ಯವಹರಿಸಲು ಭಾರತೀಯ ಆಡಳಿತ ಸೇವೆಗೆ ಸೇರಿರುವ ಅಧಿಕಾರಿಗಳನ್ನು ನೇಮಕ ಮಾಡಬೇಕೆಂಬುದಾಗಿ ಹೇಳಿದೆ.

ಹೀಗಾಗಿ ಸರ್ಕಾರವು ಉಚ್ಚ ನ್ಯಾಯಾಲಯದ ಅಭಿಪ್ರಾಯೋಕ್ತಗಳನ್ನು ಗಂಭೀರವಾಗಿ ಪರಿಗಣಿಸಿ, ಸಕ್ಷಮ ಮತ್ತು ಪ್ರಾಮಾಣಿಕ ಅಧಿಕಾರಿಗಳೆಂದು ಧೃಡಪಟ್ಟಿರುವಂಥ ಅಧಿಕಾರಿಗಳನ್ನು ವಿಶೇಷ ಡೆಪ್ಯೂಟಿ ಕಮಿಷನರುಗಳಾಗಿ ನೇಮಕ ಮಾಡಬೇಕು ಅಥವಾ ವಿಶೇಷ ಡೆಪ್ಯೂಟಿ ಕಮಿಷನರ ಕಳಂಕಿತ ಹುದ್ದೆಯನ್ನೇ ರದ್ದುಗೊಳಿಸಬೇಕು, ಇಲ್ಲದಿದ್ದರೆ, ಕಂದಾಯಕ್ಕೆ ಸಂಬಂಧಿಸಿದ ಕಾನೂನು ವಿಚಾರಗಳೆಲ್ಲವನ್ನು ವ್ಯವಹರಿಸಲು, ಭಾರತೀಯ ಆಡಳಿತ ಸೇವೆಯ ಶ್ರೇಣಿಗೆ ಸೇರಿದಂಥ ಚಿಕ್ಕವಯಸ್ಸಿನ ಸಕ್ಷಮ ಅಧಿಕಾರಿಗಳನ್ನು ನೇಮಕ ಮಾಡಬೇಕು ಅವರು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳ ಅಡಿಯಲ್ಲಿ ಹಾಗೂ ಭೂ ಕಂದಾಯ ಅಧಿನಿಯಮದ ವಿವಿಧ ಉಪಬಂಧಗಳ ಅಡಿಯಲ್ಲಿ ಸರ್ಕಾರಿ ಮತ್ತು ಸಾರ್ವಜನಿಕ ಜಮೀನುಗಳ ಸಂರಕ್ಷಣೆಯಲ್ಲಿ ಕ್ರಮ ಕೈಗೊಳ್ಳಲು ಕೂಡ ಅನುವಾಗುವಂತೆ ಅವರನ್ನು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟರೆಂದು ಹೆಸರಿಸಬಹುದು. ಹೀಗೆ ಮಾಡುವುದರಿಂದ ಮಾತ್ರವೇ, ತಮ್ಮ ಸ್ವಂತ ಲಾಭಕ್ಕಾಗಿ ಸರ್ಕಾರಿ ಅಧಿಕಾರಿಗಳನ್ನು

ದುರುಪಯೋಗ ಪಡಿಸಿ, ಬೆಲೆ ಬಾಳುವ ಸರ್ಕಾರಿ ಜಮೀನುಗಳನ್ನು ಕಾನೂನು ಬಾಹಿರವಾಗಿ ಹಸ್ತಾಂತರಿಸುವ ಪ್ರವೃತ್ತಿಯನ್ನು ತಡೆಯಬಹುದು.

## 6. ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರದೇಶದಲ್ಲಿ ನಗರ ಸರ್ವೆ ಕಾರ್ಯವನ್ನು ಕೈಗೊಳ್ಳುವ ಅಗತ್ಯತೆ.

ಪಹಣಿಗಳು, ಖಾತಾಗಳು, ಕಾನೂನು ಬಾಹಿರ ಲೇಔಟ್‌ಗಳು, ಕಟ್ಟಡ ನಕ್ಷೆಗಳು ಮತ್ತು ಔದ್ಯಮಿಕ ಯೋಜನೆಗಳೆಂಬ ಮುಖವಾಡದ ಅಡಿಯಲ್ಲಿರುವ ರಿಯಲ್ ಎಸ್ಟೇಟ್ ಪ್ರಸ್ತಾವಗಳ ರೂಪದಲ್ಲಿ ಒತ್ತುವರಿದಾರರ ಮತ್ತು ಭೂ ಕಬಳಿಕೆದಾರರ ಪರವಾಗಿ ನಮೂದು ಮಾಡುವುದಕ್ಕೆ ಸಂಬಂಧಿಸಿದಂತೆ, ಕಂದಾಯ ಇಲಾಖೆ, ಬಿಬಿಎಂಪಿ, ಬಿಡಿಎ, ಕೆಐಎಡಿಬಿ ಮತ್ತು ಮುಜರಾಯಿ ಇಲಾಖೆಗಳಲ್ಲಿ ತುಂಬಿರುವ ಹೊಲಸು ಮತ್ತು ಭ್ರಷ್ಟಾಚಾರ ಯಾವ ಪ್ರಾಮಾಣದ್ದು ಎನ್ನು ಅರಿವು ಸರ್ಕಾರಕ್ಕೆ ಆಗಿರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯ ಬಿಎಂಆರ್‌ಡಿಎ ಪ್ರದೇಶ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯಲ್ಲಿ ಇನ್ನೂ 5 ಲಕ್ಷ ಎಕರೆಗಳಷ್ಟು ಸರ್ಕಾರಿ ಜಮೀನು ಲಭ್ಯವಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಹೆಚ್ಚಿನ ಈ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ. ಅಥವಾ ಅನಧಿಕೃತ ಮತ್ತು ಅನರ್ಹ ವ್ಯಕ್ತಿಗಳು ಈ ಬಗ್ಗೆ ಕ್ಲೇಮು ಮಾಡಿರುತ್ತಾರೆ. ಈ ಜಮೀನನ್ನು ಸರ್ವೆ ನಡೆಸಿ ಅವುಗಳನ್ನು ಸಂರಕ್ಷಿಸುವುದು ಮತ್ತು ಭವಿಷ್ಯತ್ತಿನ ಸಾರ್ವಜನಿಕ ಉದ್ದೇಶಗಳಿಗಾಗಿ ಮಹಾ ಯೋಜನೆಯೊಂದನ್ನು ತಯಾರಿಸುವುದು ಅತ್ಯವಶ್ಯಕವಾಗಿದೆ.

ಹೀಗಾಗಿ ತಡವಾಗಿಯಾದರೂ ಸರ್ಕಾರವು, ಕರ್ನಾಟಕದ ಐದು ನಗರಗಳಲ್ಲಿ ಈಗಾಗಲೇ ನಡೆಯುತ್ತಿರುವ ನಗರ ಸ್ವತ್ತು ಸ್ವಾಮ್ಯ ದಾಖಲೆ (ಯುಪಿಬಿಆರ್) ಯೋಜನೆಯ ಅಡಿಯಲ್ಲಿ ಬೆಂಗಳೂರು ಮಹಾನಗರ ಪ್ರದೇಶದ ನಗರ ಸರ್ವೆಯನ್ನು ಕೈಗೆತ್ತಿಗೊಳ್ಳಬೇಕು. ಪ್ರಾರಂಭಿಕ ಕ್ರಮವಾಗಿ ಬಿಎಂಆರ್‌ಡಿಎ ಪ್ರದೇಶದೊಳಗಿರುವ ಸರ್ಕಾರಿ ಮತ್ತು ಸಾರ್ವಜನಿಕ ಜಮೀನುಗಳ ಸರ್ವೆ ಕಾರ್ಯವನ್ನು ನಡೆಸಬೇಕು.

## 7. ಜೀವ ಪರಿಸರ ಕಾರಣಗಳಿಗಾಗಿಯೇ ಅಲ್ಲದೆ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಕೆಗಾಗಿಯೂ ಕೆರೆಗಳನ್ನು ಸುಸ್ಥಿತಿಗೆ ತರುವುದು.

2020ಕ್ಕೂ ಮೊದಲು ಬೆಂಗಳೂರಿನಲ್ಲಿ ಸಂಭವಿಸಬಹುದಾದ ಜಲ ಕ್ಷಾಮದ ಬಗ್ಗೆ ಸರ್ಕಾರಕ್ಕೆ ಬಿಡಬ್ಲ್ಯೂಎಸ್‌ಎಸ್‌ಬಿ ಗೆ ಮತ್ತು ನಾಗರಿಕರಿಗೆ ಇನ್ನೂ ಅರಿವು ಇದ್ದಂತಿಲ್ಲ. ಕಾವೇರಿ ಜಲ

ನ್ಯಾಯಾಧಿಕರಣವು ಹಂಚಿಕೆ ಮಾಡಿರುವ 19 ಟಿಎಮ್‌ಸಿ ನೀರನ್ನು ಈಗಾಗಲೇ ಸಂಪೂರ್ಣವಾಗಿ ಬಳಸಲಾಗಿದ್ದು, ಆಲ್ಮಟ್ಟಿಯಿಂದ, ಪಶ್ಚಿಮದೆಡೆಗೆ ಹರಿಯುವ ನದಿಗಳಿಂದ ನೀರು ತರುವ ಇನ್ನು ಹೆಚ್ಚು ಕೊರೆ ಬಾವಿಗಳನ್ನು ತೋಡುವ ಕಂಟ್ರಾಕ್ಟರುಗಳ ಬೃಹತ್ ಕನಸಿನ ಯೋಜನೆಗಳು ಕಾರ್ಯ ಸಾಧ್ಯವಲ್ಲದೆ ಅಥವಾ ಕಡಿಮೆ ವೆಚ್ಚದ್ದಲ್ಲದ ಕಾರಣ, ಜಿಲ್ಲೆಯಲ್ಲಿರುವ ಕೆರೆಗಳನ್ನು ತಕ್ಷಣ ಸುಸ್ಥಿತಿಗೆ ತರುವುದು ಈ ಸಮಸ್ಯೆಗೆ ಇರುವ ಏಕೈಕ ಸ್ಪಷ್ಟ ಪರಿಹಾರ, ಇದನ್ನು ಕೂಡಲೇ ಕಾರ್ಯಾಚರಣೆಗೆ ತರಬೇಕು. ಉಚ್ಚ ನ್ಯಾಯಾಲಯದ ನಿರ್ದೇಶನದಲ್ಲಿ ತಯಾರಿಸಿದಂಥ ಕ್ರಿಯಾ ಯೋಜನೆಯು, ಪ್ರವಾಹ ನೀರಿನ ನಾಲೆಗಳ 840 ಕಿ.ಮೀ. ಉದ್ದ ನಡೆದಿರುವ ಒತ್ತುವರಿಯನ್ನು ತೆರವು ಮಾಡುವ ಸಮಸ್ಯೆಗೆ ಅಥವಾ ವೆಚ್ಚಕ್ಕೆ ಸಂಬಂಧಿಸಿದಂತೆ, ಏನನ್ನು ಹೇಳುವುದಿಲ್ಲ. ಈ ನಾಲೆಗಳು ಕೆರೆಗಳಿಗೆ ಹೊಲಸು ಕೊಚ್ಚನ್ನೊಯ್ಯುವ ಮತ್ತು ಕೆರೆಗಳನ್ನು ರೊಚ್ಚು ಟ್ಯಾಂಕುಗಳನ್ನಾಗಿ ಮಾಡುವ ಚರಂಡಿ ನಾಲೆಗಳಾಗಿ ಪರಿಣಮಿಸಿದೆ. ಇದೊಂದು ಅತಿ ದೊಡ್ಡ ಸಮಸ್ಯೆಯಾಗಿದ್ದು, ಇದರಲ್ಲಿ ಒತ್ತುವರಿಗಳನ್ನು ತೆರವು ಮಾಡುವುದು. ಚರಂಡಿಗಳ ಗತಿ ಬದಲಾವಣೆ, ಎಸ್‌ಟಿಪಿ ಗಳು ಕೊಳಚೆ ನೀರು ಶುದ್ಧೀಕರಣ ಸ್ಥಾವರಳ ನಿರ್ಮಾಣ, ರಿವರ್ಸ್ ಓಸ್ಮೋಸಿಸ್ ವ್ಯವಸ್ಥೆಯೇ ಮುಂತಾದುವುಗಳನ್ನು ಅಳವಡಿಸುವುದು ಇವೆಲ್ಲವೂ ಸೇರಿರುತ್ತದೆ. ಹಾಗೂ ಈ ತ್ವರಿತ ಕ್ರಿಯಾ ಯೋಜನೆಯನ್ನು ಗೊತ್ತು ಪಡಿಸಿದಂತೆ ಮೂರು ವರ್ಷಗಳೊಳಗೆ ಕೈಗೊಳ್ಳುವುದು ಸಾಧ್ಯವಿಲ್ಲ. ಅದರಲ್ಲೂ ಬಿಬಿಎಂಪಿ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಡಿಎ, ಸಣ್ಣ ನೀರಾವರಿ ಯೋಜನೆಯೇ ಮುಂತಾದ ಭಾಗವಹಿಸುವ ನಿಕಾಯಗಳ ಹಣಕಾಸು ಪರಿಮಿತಿಯೊಳಗಂತೂ ಖಂಡಿತ ಸಾಧ್ಯವಿಲ್ಲ. ಕಾನೂನುಬದ್ಧ ಅಧಿಕಾರಗಳನ್ನು ಹೊಂದಿರುವ ಪರಿಣಾಮಕಾರಿಯಾದ ಕೆರೆ ಅಭಿವೃದ್ಧಿ ಪ್ರಾಧಿಕಾರವೊಂದನ್ನು ರಚಿಸಲು ಒಂದು ವಿಧೇಯಕವನ್ನು ಅಂಗೀಕರಿಸಬೇಕು. ಈ ಹತ್ತು ಹಲವಾರು ಏಜನ್ಸಿಗಳು ಏಕಮತ್ಯದಲ್ಲಿ ಕಾರ್ಯನಿರ್ವಹಿಸಲು ಅಸಮರ್ಥವಾಗಿರುವುದರಿಂದ ಹಾಗೂ ಅವರ ಪ್ರಯತ್ನಗಳು ಹರಿದು ಹಂಚಿ ಹೋಗುವ ಸಂಭವವಿರುವ ಕಾರಣ, ಕೆರೆಗಳನ್ನು ಸುಸ್ಥಿತಿಗೆ ತರುವ ಕಾರ್ಯವನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಬೇಕು.

ಆದುದರಿಂದ ಕೆರೆ ಅಭಿವೃದ್ಧಿ ಪ್ರಾಧಿಕಾರದ ಸ್ವರೂಪದ ಶೃಂಗನಿಕಾಯವೊಂದನ್ನು ರಚಿಸಬೇಕು ಹಾಗೂ ಕಾರ್ಯಾನುಷ್ಠಾನದ ಹತ್ತು ವರ್ಷಗಳ ಅವಧಿಗೆ ಸುಮಾರು 10,000 ಕೋಟಿ ರೂ ಅಂದಾಜು ವೆಚ್ಚ ಬಾಹ್ಯ ನೆರವಿನೊಂದಿಗೆ ಸಮಗ್ರ ಕ್ರಿಯಾ ಯೋಜನೆಯೊಂದನ್ನು ತಯಾರಿಸಬೇಕು.

## 8. ಒತ್ತುವರಿದಾರರು ಮತ್ತು ಅಪರಾಧವನ್ನು ದುಷ್ಪ್ರೇರಿಸುವ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಾನೂನಿನ ಅಡಿಯಲ್ಲಿ ಉಪಬಂಧಿಸಿರುವಂತೆ ಕ್ರಮಕೈಗೊಳ್ಳುವುದು.

ಒತ್ತುವರಿದಾರರು ಮತ್ತು ಅವರ ದುಷ್ಪ್ರೇರಕರ ವಿರುದ್ಧ (ಸರ್ಕಾರಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳೇ ಮುಂತಾದ ಸಾರ್ವಜನಿಕ ಅಧಿಕಾರಿಗಳು) ಕಾನೂನು ರೀತ್ಯಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ಭಾರತೀಯ ದಂಡ ಸಂಹಿತೆಯೇ ಅಲ್ಲದೆ, ಅರಣ್ಯ ಅಧಿನಿಯಮ, ಭೂ ಕಂದಾಯ ಅಧಿನಿಯಮ ಬಿಡಿಎ ಮತ್ತು ಕಾರ್ಪೋರೇಷನ್‌ಗಳ ಅಧಿನಿಯಮಗಳು ಉಪಬಂಧ ಕಲ್ಪಿಸಿದ್ದರೂ ಕೂಡ, ಕ್ರಮ ಕೈಗೊಳ್ಳುವಂತೆ ಕಾರ್ಯ ಪಡೆಯು ಇಲಾಖೆಗಳನ್ನು ಮತ್ತು ಡೆಪ್ಯೂಟಿ ಕಮಿಷನರುಗಳನ್ನು ಒತ್ತಾಯಿಸಿದರೂ ಸಹ ಯಾರೇ ಸರ್ಕಾರಿ ಅಥವಾ ಸಾರ್ವಜನಿಕ ಅಧಿಕಾರಿಗಳ ವಿರುದ್ಧ ಯಾವುದೇ ಕಾನೂನು ಕಾರ್ಯಚರಣೆಯನ್ನು ನಡೆಸಿರುವುದಿಲ್ಲ.. 2007ರಲ್ಲಿ ಜಂಟಿ ವಿಧಾನ ಮಂಡಲ ಸಮಿತಿಯು ಈ ಮುಂದಿನಂತೆ ಬಲವಾಗಿ ಶಿಫಾರಸ್ಸು ಮಾಡಿದೆ.

"ನ್ಯಾಯನಿಯಮವನ್ನು ಎತ್ತಿ ಹಿಡಿಯುವುದು ಆಡಳಿತದ ಕರ್ತವ್ಯ. ಬೆಳೆಗಳ ರಕ್ಷಿಸುವುದು, ಪಾಲಕನಾಗಿ, ನ್ಯಾಸಧಾರಿಯಾಗಿ ಮತ್ತು ಒಬ್ಬ ಕಾವಲುಗಾರನಾಗಿ ಅನುವರ್ತಿಸುವುದು. ಬೇಲಿಯ ಉದ್ದೇಶ. ಆದರೆ ಮೇಲಿನ ಪ್ಯಾರಾಗಳಲ್ಲಿನ ಕೆಲವು ನಿದರ್ಶನಗಳು, ಬೇಲಿ ಸ್ವತಃ ಬೆಳೆಗಳನ್ನು ತಿನ್ನುವುದನ್ನು, ಪಾಲಕನು ಸ್ವಯಂ ಪಾಲಿತನನ್ನು ಹಿಂಸಿಸುವುದನ್ನು ನ್ಯಾಸದಾರಿಯು ತಾನೇ ಫಲಾನುಭವಿಯನ್ನು ದೋಚುವುದನ್ನು ಮತ್ತು ಕಾವಲುಗಾರನು ನಾಕರಿಕರನ್ನು ಲೂಟಿ ಹೊಡೆಯುವುದನ್ನು ತೋರಿಸುತ್ತದೆ. ಈ ಕಾನೂನು ಬಾಹಿರ ಸಮಾಜಘಾತಕ ಮತ್ತು ಅನೈತಿಕ ಕೃತ್ಯಗಳನ್ನು ಶಿಕ್ಷಿಸದೆ ಹೋದರೆ, ಸತ್ಯಪರರಾದ ನಾಗರಿಕರು ಸರ್ಕಾರದ ಮೇಲಿನ ವಿಶ್ವಾಸವನ್ನೇ ಕಳೆದು ಕೊಳ್ಳುತ್ತಾರೆ. ಮತ್ತು ಯಾವ ಸಾಮಾಜಿಕ ಒಪ್ಪಂದದ ಮೇಲೆ ರಾಜ್ಯವನ್ನು ಸ್ಥಾಪಿಸಲಾಗಿದೆಯೋ ಅಂಥ ಸಾಮಾಜಿಕ ಒಪ್ಪಂದವು ಮರಳಿನ ಮೇಲೆ ಕಟ್ಟಿದ ಕೋಟೆಗಳಂತೆ ನುಚ್ಚು ನೂರಾಗಿ ಬಿಡುತ್ತದೆ.

ಆದ್ದರಿಂದ (ಸರ್ಕಾರಿ ಮತ್ತು ಸರ್ಕಾರೀತರ) ಸರ್ಕಾರಿ ನೌಕರರನ್ನು ಅವರು ಭೂಕಬಳಿಕೆ ಪ್ರಕರಣಗಳಲ್ಲಿ ತೊಡಗಿರುವ ಎಲ್ಲ ಪ್ರಸಂಗಗಳಲ್ಲೂ ಭಾರತ ದಂಡ ಸಂಹಿತೆಯ ಅಡಿಯಲ್ಲಿ ಪ್ರತಿಷೇಧಿಸುವುದು ಮತ್ತು ಕಾನೂನು ಕ್ರಮ ಕೈಗೊಳ್ಳುವುದು ತೀರ ಅವಶ್ಯಕವಾಗಿದೆ. ಇತ್ತೀಚೆಗೆ ಈ ಸಮಿತಿಯ ಶಿಫಾರಸ್ಸುಗಳಿಗನುಸಾರವಾಗಿ ಕರ್ನಾಟಕ ಭೂಕಬಳಿಕೆ (ನಿಷೇಧ) ಅಧಿನಿಯಮವನ್ನು ಅಂಗೀಕರಿಸಲಾಯಿತು. ಇದು ಭೂ ಕಬಳಿಕೆ ಮಾಡುವ ಮತ್ತು ದುಷ್ಪ್ರೇರಣೆ ನೀಡುವ ಸರ್ಕಾರಿ ನೌಕರರನ್ನು

ಕಾನೂನು ಕ್ರಮಕ್ಕೆ ಒಳಪಡಿಸುವ ಉಪಬಂಧಗಳನ್ನು ಹೊಂದಿದೆ. ಇವುಗಳನ್ನು ಹುರುಪಿನಿಂದ ಆಚರಣೆಗೆ ತರಬೇಕು. ಈ ಅಧಿನಿಯಮದ ಅಡಿಯಲ್ಲಿನ ನಿಯಮಗಳು ಮತ್ತು ಆಡಳಿತ ಯಂತ್ರವು ಕಾರ್ಯಾಚರಣೆಗೆ ಬರುವವರೆಗೆ, ಸುಳ್ಳು ದಾಖಲೆಗಳು, ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿ ಮಾಡುವುದು ಮತ್ತು ಅಂಥ ಉಲ್ಲಂಘನೆಗಳನ್ನು ದುಷ್ಪ್ರೇರಿಸುವುದಕ್ಕಾಗಿ ಭಾರತ ದಂಡ ಸಂಹಿತೆಯ ಈಗಿರುವ ಉಪಬಂಧಗಳ ಮೊರೆ ಹೋಗಬೇಕು.

ಹೀಗಾಗಿ ಸರ್ಕಾರವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಕಾನೂನಿನ ವಿವಿಧ ಉಪಬಂಧಗಳ ಅಡಿಯಲ್ಲಿ ಈ ಬಗ್ಗೆ ಅಧಿಕಾರ ಪಡೆದಂಥ ಅಧಿಕಾರಿಗಳಿಗೆ ಅಪರಾಧ ಮಾಡಿದವರ ಮತ್ತು ಅಪರಾಧಕ್ಕೆ ದುಷ್ಪ್ರೇರಣೆ ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸುವುದು ಬಹಳ ಅಗತ್ಯದ ವಿಚಾರವಾಗಿದೆ.